
# ತ್ರೈಯೇಕತ್ವದ ಅಭ್ಯಾಸ

## (ದೈವೀಕ ರಹಸ್ಯವನ್ನು ಬಿಚ್ಚಿಡುವದು ಮತ್ತು ಪವಿತ್ರಾತ್ಮ.)

ಭಾಗ – 1

ಅಧ್ಯಯನ # 23



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

“ನಿನ್ನ ವಾಕ್ಯವೇ ಸತ್ಯವು” - ಯೋಹಾನನು 17:17

ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 23

# ತ್ರೈಯೇಕತ್ವದ ಅಭ್ಯಾಸ

### ದೈವೀಕ ರಹಸ್ಯವನ್ನು ಬಿಚ್ಚಿಡುವದು ಮತ್ತು ಪವಿತ್ರಾತ್ಮ

**ದಯವಿಟ್ಟು ಗಮನಿಸಿ: ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.**

*ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.*

ಈ ದಿನ ನಾವು ತ್ರೈಯೇಕತ್ವದ “**ಬೋಧನೆ**”ಯನ್ನು ಕುರಿತು ಅಭ್ಯಾಸ ಮಾಡಲಿದ್ದೇವೆ.

ಕ್ರೈಸ್ತರಲ್ಲಿ ಬಹುಭಾಗದವರು ದೇವರನ್ನು ಮತ್ತು ಆತನ ಸ್ವಭಾವವನ್ನು ಕುರಿತು ಈ ರೀತಿಯಾಗಿ ನಂಬುತ್ತಾರೆ!

ಈ ರೀತಿಯಾದ ಬೋಧನೆಯು ದೇವರು ತ್ರೈಯೇಕತ್ವವುಳ್ಳವರು ಎಂದು ಭೋಧಿಸುತ್ತದೆ – ಅಂದರೆ, ದೇವರು ಮೂರು ವ್ಯಕ್ತಿಗಳಾಗಿದ್ದಾರೆ ಆದಾಗ್ಯೂ ಒಂದೇ ದೇವರಾಗಿದ್ದಾರೆ!

ತಂದೆ, ಮಗ ಮತ್ತು ಪವಿತ್ರಾತ್ಮ ಮೂರು “**ದೇವರುಗಳು**” ಆದಾಗ್ಯೂ ಮೂವರನ್ನು ಕೂಡಿಸಿದರೆ ಮೂರು ದೇವರಾಗುವುದಿಲ್ಲ ಆದರೆ ಒಂದೇ ದೇವರು!!!



**ಯಾರಾದರು, ಇದು ಹೇಗೆ ಸಾಧ್ಯ? ಎಂದು ಕೇಳಬಹುದು**

ಗಣಿತ ಶಾಸ್ತ್ರದ ಪ್ರಕಾರ......

$$1 + 1 + 1 = 3$$

ಇಲ್ಲಿ ನಂಬುವದು ಮತ್ತು ಬೋಧಿಸುವುದೇನೆಂದರೆ......

1 + 1 + 1 = 1

**ಕಾರಣ ಅರ್ಥವಾಗುವುದಿಲ್ಲ!! ಇದನ್ನು ದೈವೀಕ ರಹಸ್ಯ ಎನ್ನಲಾಗುತ್ತದೆ!!**

ಈ "ರಹಸ್ಯವನ್ನು" ಅರಿತುಕೊಳ್ಳಲು ಅನೇಕರು ವ್ಯರ್ಥವಾಗಿ ಪ್ರಯತ್ನಿಸುತ್ತಾರೆ.

ಆದ್ದರಿಂದ ದೇವರು ಈಗ ನಮಗೆ ಒಂದು ರಹಸ್ಯವಾಗಿದ್ದಾರೆ.

ಇದು ಆದಿ ಸಭೆಯಲ್ಲಿ ಅಪೋಸ್ತಲನಾದ ಪೌಲನಿಗೆ ಏನೋ ಒಂದು ಸಂಗತಿ ನಡೆದದ್ದು ನಮ್ಮ ಮನಸ್ಸಿಗೆ ಬರುತ್ತದೆ.

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

## ಅಪೋಸ್ತಲರ ಕೃತ್ಯಗಳು 17:22,23

**"ಆಗ ಪೌಲನು ಅಂಗಾರಕದ ಬೆಟ್ಟದ ಮಧ್ಯದಲ್ಲಿ ನಿಂತು--ಅಥೇನೆಯ ಜನರೇ, ಎಲ್ಲಾ ವಿಷಯಗಳಲ್ಲಿ ನೀವು ಮೂಢ ಭಕ್ತರೆಂದು ನಾನು ಗ್ರಹಿಸುತ್ತೇನೆ."**

**" ನಾನು ಹಾದು ಹೋಗುತ್ತಿರಲು ನಿಮ್ಮ ಧ್ಯಾನಗಳನ್ನು ನೋಡುತ್ತಾ ಇದ್ದಾಗ ಒಂದು ಬಲಿಪೀಠವು ನನ್ನ ಕಣ್ಣಿಗೆ ಬಿತ್ತು; ಅದರ ಮೇಲೆ--ತಿಳಿಯದ ದೇವರಿಗೆ ಎಂದು ಬರೆದಿತ್ತು. ಆದಕಾರಣ ನೀವು ಯಾವದನ್ನು ತಿಳಿಯದೆ ಪೂಜಿಸುತ್ತೀರೋ ಅದನ್ನೇ ನಿಮಗೆ ತಿಳಿಯಪಡಿ ಸುತ್ತೇನೆ."**

ಹೌದು! "ಅಂಗಾರಕದ ಬೆಟ್ಟ"ದಲ್ಲಿ ಗ್ರೀಕರಿಗೆ ಇಸ್ರಾಯೇಲಿನ ದೇವರನ್ನು

**"ತಿಳಿಯದ ದೇವರು"** ಎಂದು ಸೂಚಿಸಲಾಗಿದೆ.

ಹೌದು! "ಅಂಗಾರಕದ ಬೆಟ್ಟ"ದಲ್ಲಿ ಗ್ರೀಕರಿಗೆ ಇಸ್ರಾಯೇಲಿನ ದೇವರನ್ನು

ಅಂಗಾರಕದ ಬೆಟ್ಟದಲ್ಲಿ ನಡೆದ ಹಾಗೆ.... ಇಂದು ದೇವರು ನಮಗೆ ರಹಸ್ಯ ವಾಗಿರುವಂತೆ ತೋರು ತ್ತದೆ!

ಬಹುಶಃ ಅಪೋಸ್ತಲನಾದ ಪೌಲನಂತೆ ನಿಮಗೆ ಹೇಳುವ ಭಾಗ್ಯವನ್ನು ಹೊಂದಿದ್ದೇವೆ–

**"ಆದಕಾರಣ ನೀವು ಯಾವದನ್ನು ತಿಳಿಯದೆ ಪೂಜಿಸುತ್ತೀರೋ ಅದನ್ನೇ ನಿಮಗೆ ತಿಳಿಯಪಡಿಸುತ್ತೇನೆ."**



**ಮಾರ್ಟಿನ್ ಲೂಥರ್** ಅವರಿಗೆ ಇದು ದಿಗ್‌ಭ್ರಮೆಗೊಳಿಸುವ ಪ್ರಶ್ನೆಯಾಗಿತ್ತು!



ಮಗನು ಸ್ವತಃ ದೇವರಾಗಿರುವಾಗ ತಂದೆಗೆ "**ನನ್ನ ದೇವರೇ**" ಎಂದು ಏಕೆ ಹೇಳಬೇಕು ಎಂದು ಮಾರ್ಟಿನ್ ಲೂಥರ್ ಅವರಿಗೆ ಅರ್ಥವಾಗಲಿಲ್ಲ!!

**(ಮತ್ತಾಯ 27 : 46 – "...ಯೇಸು ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈ ಬಿಟ್ಟೀದ್ದೀ ಎಂದು ಮಹಾಧ್ವನಿಯಿಂದ ಕೂಗಿದನು")**

ಮಹಾ ವಿಜ್ಞಾನಿಯಾಗಿದ್ದ ಐಸಾಕ್ ನ್ಯೂಟನ್‌ರವರು ಕ್ರೈಸ್ತ ಭಕ್ತರಾಗಿದ್ದರು. ಇವರಿಗೂ ಸಹ ತ್ರೈಯೇಕತ್ವದ ವಿಚಾರದ ಬಗ್ಗೆ ದಿಗ್‌ಭ್ರಮೆಗೊಳಿಸುವ ಪ್ರಶ್ನೆಯಾಗಿತ್ತು!

ಅನೇಕ ದೇವರ ಮಹಾಸೇವಕರು ಈ "ದೈವೀಕ ರಹಸ್ಯ"ವನ್ನು ಹುಡುಕಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರು ಆದರೆ ಇದೊಂದು ಪ್ರಶ್ನೆಯಾಗಿಯೇ ಉಳಿದಿತ್ತು!


ವಿಶೇಷವಾಗಿ ಕೆಳಗಿನ ವಾಕ್ಯವನ್ನು ಓದುವಾಗ –

**ಯೋಹಾನ 20:22**

**" ಇದನ್ನು ಹೇಳಿ ಅವರ ಮೇಲೆ ಊದಿ ಅವರಿಗೆ – ಪವಿತ್ರಾತ್ಮ ವರವನ್ನು ತಕ್ಕೊಳ್ಳಿರಿ "**

ಆ ದೇವ ಸೇವಕರೆಲ್ಲರಿಗೂ ಆಶ್ಚರ್ಯವಾಗಿದ್ದೇನೆಂದರೆ – ಹೇಗೆ ತ್ರೈಯೇಕತ್ವದ ಒಬ್ಬ ದೇವರು ತನ್ನ ಬಾಯಿಂದ ಇನ್ನೊಬ್ಬ ತ್ರೈಯೇಕತ್ವದ ದೇವರನ್ನು ಅನೇಕ ವ್ಯಕ್ತಿಗಳ ಮೇಲೆ ಊದಲು ಸಾಧ್ಯ!!





ಮತ್ತೆ ಕೆಳಗಿನ ವಾಕ್ಯದಲ್ಲಿ –

**ಲೂಕ 12:10**

**"ಮನುಷ್ಯಕುಮಾರನ ಮೇಲೆ ಏನಾದರೂ ಮಾತಾಡುವ ಪ್ರತಿಯೊಬ್ಬನಿಗೆ ಕ್ಷಮಾಪಣೆಯಾಗುವದು; ಆದರೆ ಪವಿತ್ರಾತ್ಮನನ್ನು ದೂಷಿಸಿದವನಿಗೆ ಕ್ಷಮಾಪಣೆಯಿಲ್ಲ"**

ಅವರೆಲ್ಲರಿಗೂ ಆಶ್ಚರ್ಯವಾದದ್ದೇನೆಂದರೆ ತ್ರೈಯೇಕತ್ವದ ಮೂರು ದೇವರುಗಳು ಸಮಾನರಾಗಿದ್ದರೆ ಇಲ್ಲಿ ಯೇಸು ತನಗಿಂತ ಪವಿತ್ರಾತ್ಮನನ್ನು ಹೆಚ್ಚಿನದಾಗಿ ಹೇಳಿಕೊಂಡು ತನಗೆ ವಿರೋಧವಾಗಿ ಮಾತಾಡಿದರೆ ಕ್ಷಮಾಪಣೆಯಿದೆ ಆದರೆ ಪವಿತ್ರಾತ್ಮನಿಗೆ ವಿರೋಧವಾಗಿ ಮಾತಾಡಿದರೆ ಕ್ಷಮಾಪಣೆ ಇಲ್ಲ?



**ಇದು ಹೇಗೆ ಸಾಧ್ಯ?**

ಈ ದಿನಗಳಲ್ಲಿ ವೇದಾಂತ ಮತ್ತು ವೇದಾಂತಿಗಳು ಸತ್ಯವೇದ ವಿದ್ಯಾಲಯಗಳಲ್ಲಿ ಮತ್ತು ಸಭೆಗಳಲ್ಲಿ ಸತ್ಯವೇದವನ್ನು ಬಿಟ್ಟು ಬೇರೆ ಹೊರಗಿನ ಉದಾಹರಣೆಗಳು ಮತ್ತು ನಿರ್ದಶನಗಳನ್ನು ನೀಡಲು ಪ್ರಯತ್ನಿಸುತ್ತಾರೆ. ಕೆಳಗೆ ಕೊಟ್ಟಿರುವಂತೆ–




ನೀರು ಮತ್ತು ಅದರ ಎರಡು ಸ್ವರೂಪವಾದ ಮಂಜುಗಡ್ಡೆ ಮತ್ತು ಹಬೆ (ಆವಿ)ಯನ್ನು ಉಪಯೋಗಿಸಿಕೊಂಡು ತ್ರೈಯೇಕತ್ವವನ್ನು ಕುರಿತು ವಿವರಿಸುತ್ತಾರೆ.





ಈ ಮೂರು ಸ್ವರೂಪವಾದ ನೀರು, ಗಟ್ಟಿ ಪದಾರ್ಥ ಮತ್ತು ಹಬೆಯನ್ನು ದೇವರ ತ್ರೈಯೇಕತ್ವದ ವಿಚಾರಕ್ಕೆ ಹೋಲಿಸುತ್ತಾರೆ. ಆಗ ಒಂದು ಮಗು ಇದನ್ನು ಕೇಳಿ ಒಂದು ವೇಳೆ ತಂದೆಯಾದ ದೇವರನ್ನು ನೀರಿಗೆ ಹೋಲಿಸಿದರೆ, ನಂತರ ಆ ತಂದೆಯನ್ನು ಬಿಸಿ ಮಾಡಿದಾಗ ತಂದೆಯು ಮಗ ಅಥವಾ ಪವಿತ್ರಾತ್ಮನಾಗಿ ಮಾರ್ಪಡುವರೆ?

ಆಗ ಆ ಸ್ಥಳದಲ್ಲಿರುವವರೆಲ್ಲರಿಗೂ ಬಹಳ ನಗು ಬರುತ್ತದೆ!!

2 ಮೊಟ್ಟೆ ಮತ್ತು ಅದರ 3 ಭಾಗಗಳು – ಚಿಪ್ಪು, ಬಿಳಿಭಾಗ ಮತ್ತು ಹಳದಿ ಭಾಗಗಳನ್ನು ಉಪಯೋಗಿಸಿಕೊಂಡು ತ್ರೈಯೇಕತ್ವವನ್ನು ಕುರಿತು ನಿದರ್ಶನವಾಗಿ ಬೋಧಿಸುತ್ತಾರೆ.



3 ಬೈಸಿಕಲ್ (ಕಾಲುಗಾಡಿ) ಮತ್ತು ಅದರ ಎರಡು ಚಕ್ರಗಳು ಮತ್ತು ಮೂರನೆಯ ಚಕ್ರವಾದ ಸರಪಳಿ ಅಥವಾ ಗೇರ್ವೀಲ್ ಇನ್ನೊಂದು ನಿದರ್ಶನವಾಗಿ ತೋರಿಸುತ್ತಾರೆ 3 ರಲ್ಲಿ 1 ಎಂಬ ವಿಚಾರಕ್ಕೆ ಹೀಗೆ ಅನೇಕ ಉದಾಹರಣೆಗಳನ್ನು ಉಪಯೋಗಿಸುತ್ತಾರೆ.



ಇನ್ನೊಂದು ಉದಾಹರಣೆಯಾಗಿ 3 ವಿಧವಾಗಿ ರುಚಿಯುಳ್ಳ "**ಕಸಾಟಾ ಐಸ್‌ಕ್ರೀಮ್**" ಅನ್ನು ನಿದರ್ಶನವಾಗಿ ನೀಡಬಹುದು!!

ಆದರೆ, ಸಹೋದರ ಮತ್ತು ಸಹೋದರಿಯರೆ, ತ್ರೈಯೇಕತ್ವವನ್ನು ಅರ್ಥಮಾಡಿಕೊಳ್ಳಲು ಈ ವಿಧವಾದ ನಿದರ್ಶನಗಳು ಮತ್ತು ಉದಾಹರಣೆಗಳನ್ನು ನೀಡುವುದಾದರೆ, ಈ "**ರಹಸ್ಯ**"ವನ್ನು ತನ್ನ ಒಂದು ಅಥವಾ ಅನೇಕ ಸಾಮ್ಯರೂಪದಲ್ಲಿ ಬಹಳ ಸುಂದರವಾಗಿ ಇದನ್ನು ನಿದರ್ಶಸಬಹುದಾಗಿತ್ತು! (ನೆನಪಿಡಿರಿ, ಯೇಸು 39 ಸಾಮ್ಯಗಳನ್ನು ಹೇಳಿದ್ದಾರೆ)

ಆದರೆ ಆತನು ಹಾಗೆ ಮಾಡಲಿಲ್ಲ!


ಈ ವಿಷಯವನ್ನು ಸತ್ಯವೇದದಿಂದಲೇ ಓದಿ ಅರ್ಥಮಾಡಿ ಕೊಳ್ಳೋಣ " ಯೆಹೋವನ ಶಾಸ್ತ್ರದಲ್ಲಿ ಹುಡೂಕಿ ಓದಿರಿ (ಯೇಶಾಯ 34:16)

## .....ಸತ್ಯವೇದದಲ್ಲಿ ಈ ಪದವೇ ಇಲ್ಲ! (Not found in the Bible)

ಸತ್ಯವೇದದಲ್ಲಿ "**ತ್ರೈಯೇಕತ್ವ**" (ಟ್ರಿನಿಟಿ) ಎಂಬ ಪದವು ಎಷ್ಟು ಸಾರಿ ಇದೆ ಎಂದು ಮೊದಲು ನೋಡೋಣ.

"ತ್ರೈಯೇಕತ್ವ" (ಟ್ರಿನಿಟಿ) ಎಂದು ಬರುವ ಪದದ ವಾಕ್ಯಗಳನ್ನು ಅಭ್ಯಾಸ ಮಾಡುವಾಗ ನಮಗೆ ಸತ್ಯವೇದವು ತ್ರೈಯೇಕತ್ವದ ಬಗ್ಗೆ ಏನು ಬೋಧಿಸುತ್ತದೆ ಎಂದು ನಮಗೆ ತಿಳಿಯುತ್ತದೆ.

ಕಂಕಾರ್ಡ್ನಸ್ (ಕನ್ಕಾರ್ಡೆನ್ಸ್) ಎಂಬ ಪುಸ್ತಕವು ಈ ಕೆಲಸಕ್ಕೆ ನಮಗೆ ಬಹಳವಾಗಿ ಉಪಯೋಗವಾಗುತ್ತದೆ. ಇದನ್ನು ವಿದ್ಯುನ್ಮಾನ ಸತ್ಯವೇದ (ಎಲೆಕ್ಟ್ರಾನಿಕ್ ಬೈಬಲ್) ಎಂದು ಕರೆಯಲಾಗುತ್ತದೆ. (ವಿದ್ಯುನ್ಮಾನ ಫೋನ್ ಡೈರಿ ಇದ್ದಂತೆ) ಅಥವಾ ಕಂಪ್ಯೂಟರ್ ಬೈಬಲ್ ಸಹ ಉಪಯೋಗವಾಗುತ್ತದೆ.



ಕಂಪ್ಯೂಟರ್ ಬೈಬಲ್‌ನಲ್ಲಿ ತ್ರೈಯೇಕತ್ವ (ಟ್ರಿನಿಟಿ) ಎಂಬ ಪದವನ್ನು ಒತ್ತಿದರೆ ಸಾಕು, ಸತ್ಯವೇದದಲ್ಲಿ ತ್ರೈಯೇಕತ್ವ ಎಂಬ ಪದವಿರುವ ಎಲ್ಲಾ ವಾಕ್ಯಗಳನ್ನು ತೆರೆಯಲ್ಲಿ ತೋರಿಸುತ್ತದೆ!

ಈಗ ಕಂಪ್ಯೂಟರ್‌ನಲ್ಲಿ ಟ್ರಿನಿಟಿ ಎಂಬ ಪದವನ್ನು ಒತ್ತಿ ನಂತರ ಸರ್ಚ್ ಎಂಬ ಪದದ ಕಂಪ್ಯೂಟರ್ (ಕೀ) ಒತ್ತಬೇಕು.

ಕೆಲವೇ ಕ್ಷಣಗಳಲ್ಲಿ ಕಂಪ್ಯೂಟರ್ ತೆರೆಯಲ್ಲಿ ಬರುವ ಉತ್ತರವೇನೆಂದರೆ–

**.....ಸತ್ಯವೇದದಲ್ಲಿ ಈ ಪದವೇ ಇಲ್ಲ! (ನಟ್ ಫೌಂಡ್ ಇನ್ ಬೈಬಲ್ )**

**ಇದು ಬಹಳ ಆಶ್ಚರ್ಯ ಮತ್ತು ಆತಂಕದ ವಿಷಯ!**

ಸತ್ಯವೇದದಲ್ಲಿ ತ್ರೈಯೇಕತ್ವ ಅಥವಾ ತ್ರೈಯೇಕ ದೇವರು ಎಂಬ ಪದವೇ ದೊರೆಯಲಿಲ್ಲ.

ಇದು ಹಳೆಯ ಒಡಂಬಡಿಕೆಯಲ್ಲಿ ಇಲ್ಲ ಮತ್ತು ಯೇಸು ನಾಲ್ಕು ಸುವಾರ್ತಾ ಪುಸ್ತಕಗಳಲ್ಲಿ ಎಂದಿಗೂ ಇದರ ಬಗ್ಗೆ ಮಾತಾಡಲಿಲ್ಲ ಮತ್ತು ಅಪೋಸ್ತಲರಾದ ಪೌಲನು, ಪೇತ್ರ, ಯೇಹಾನ, ಯಾಕೋಬ ಇತರರು, ತಮ್ಮ ಪತ್ರಿಕೆಗಳಲ್ಲಿ ಎಂದಿಗೂ ಈ ಪದವನ್ನು ಉಪಯೋಗಿಸಲಿಲ್ಲ.



ಮತ್ತು ನೆನಪಿಡಿರಿ, ಅವರೆಲ್ಲರೂ ಯೇಸು ಕ್ರಿಸ್ತನ ಜೀವನ, ದೇವರ ಮತ್ತು ಆತನ ದೈವೀಕ ಯೋಜನೆಗಳನ್ನು ಕುರಿತು ಬರೆದಿದ್ದಾರೆ! **ಆದರೆ ಎಲ್ಲಿಯೂ ತ್ರೈಯೇಕತ್ವ (Trinity) ಎಂಬ ಪದವನ್ನು ಉಪಯೋಗಿಸಲಿಲ್ಲ.**

ಕೊನೆಯ ಪುಸ್ತಕವಾದ "ಪ್ರಕಟನೆ"ಯಲ್ಲಿ ಸುವಾರ್ತಾ ಯುಗದ ಇತಿಹಾಸವನ್ನು ಸಾಂಕೇತಿಕವಾಗಿ ದಾಖಲಿಸಲಾಗಿದೆ.

**ಆದರೆ "ತ್ರೈಯೇಕತ್ವ" (Trinity) ಎಂಬ ಪದವೇ ಇಲ್ಲ!**

ಆದರೆ.....ಹೌದು! ಈ ದಿನಗಳಲ್ಲಿ ತ್ರೈಯೇಕತ್ವ ಎಂಬ ಪದವನ್ನು ಎಲ್ಲಾ ಕಡೆಯಲ್ಲಿ ನೋಡುತ್ತೇವೆ –

ಹಾಡಿನ ಪುಸ್ತಕಗಳಲ್ಲಿ, ಮತಾಭಿಪ್ರಾಯ ಪುಸ್ತಕಗಳಲ್ಲಿ (ಕ್ರೀಡ್ಸ್ ಬೂಕ್ಸ್), ಪ್ರಾರ್ಥನೆಗಳಲ್ಲಿ, ಧರ್ಮ ಪ್ರವಚನ ಪೀಠಗಳಲ್ಲಿ ಮತ್ತು ಚಿತ್ರ ಕಲೆಯಲ್ಲಿಯೂ ಸಹ ನೋಡುತ್ತೇವೆ!

ವಾಟಿಕನ್ ಪಟ್ಟಣದಲ್ಲಿ (Vatican City) **ಮೂರು ವ್ಯಕ್ತಿಗಳು ಒಂದು ಸಿಂಹಾಸನದಲ್ಲಿ ಕುಳಿತಿದ್ದು,** ಬಿಳಿಕೂದಲು ಮತ್ತು ಬಿಳಿ ಬಣ್ಣದ ದಾಡಿ ಇದ್ದು ಆತನನ್ನು ತಂದೆಯಾದ ದೇವರು ಎನ್ನುತ್ತಾರೆ. ತಂದೆಯ ಬಲಗಡೆಯಲ್ಲಿ ಇರುವಾತನಿಗೆ ಕಪ್ಪು ಕೂದಲು ಮತ್ತು ಕಪ್ಪು ದಾಡಿ ಇದ್ದು ಆತನನ್ನು ಮಗ ಎನ್ನುತ್ತಾರೆ ಮತ್ತು ತಂದೆಯ ಎಡಗಡೆಯಲ್ಲಿ ಕೂತಿರುವಾತನಿಗೆ ದಾಡಿಯೇ ಇಲ್ಲ ಮತ್ತು ಆತನನ್ನು **ಪವಿತ್ರಾತ್ಮ ಎನ್ನುತ್ತಾರೆ!**



ನಮಗೆ ಉಂಟಾಗುವ ಪ್ರಶ್ನೆ ಏನೆಂದರೆ –

## "ತಂದೆಯಾದ ದೇವರಿಗೆ ಪವಿತ್ರಾತ್ಮನು ಎರಡನೆಯ ಮಗನೆ???"



## ಪವಿತ್ರಾತ್ಮನು ಯೇಸು ಕ್ರಿಸ್ತನ ತಮ್ಮನೆ??

ಈ ಚಿತ್ರ ಕಲೆಯಲ್ಲಿರುವ ಇನ್ನೊಂದು ವಿಷಯ ಏನೆಂದರೆ ಸಿಂಹಾಸನದಲ್ಲಿ ಮೂರು ವ್ಯಕ್ತಿಗಳು ಕುಳಿತಿದ್ದರೂ ಇವರೆಲ್ಲರಿಗೂ ಸೇರಿ ಒಟ್ಟು ನಾಲ್ಕು ಕಾಲುಗಳು ಮಾತ್ರ ಇದೆ!!!

– ಅಂದರೆ ಏಕತ್ವವನ್ನು ತೋರಿಸುವುದಕ್ಕಾಗಿ ನಡುವೆ ಕುಳಿತಿರುವ ತಂದೆಯಾದ ದೇವರು ಮಗ ಮತ್ತು ಪವಿತ್ರಾತ್ಮನೊಂದಿಗೆ ಕಾಲುಗಳನ್ನು ಹಂಚಿಕೊಂಡಿದ್ದಾರೆ!!

## ಸರ್ವಶಕ್ತನಾದ ದೇವರು ಹೀಗಿದ್ದಾರೆಯೇ?


ನಂತರ, ಇನ್ನೊಂದು ಶಿಲ್ಪ ಕೆತ್ತನೆಯಲ್ಲಿ ಒಂದು ವ್ಯಕ್ತಿಗೆ ಮೂರು ತಲೆಗಳು ಇರುವಂತೆ ಕೆತ್ತಿದ್ದಾರೆಇಲ್ಲಿಯೂ ಸಹ ಮೂರು ತಲೆಗಳಲ್ಲಿ ಒಟ್ಟು ಆರು ಕಣ್ಣುಗಳು ಇರಬೇಕು.



**ಆದರೆ ನಾಲ್ಕು ಕಣ್ಣುಗಳು ಮಾತ್ರ ಇವೆ!!**

**ಇದೂ ಸಹ ದೇವರ ತ್ರೈಯೇಕತ್ವವನ್ನು ಸೂಚಿಸುತ್ತದೆ ಎನ್ನುತ್ತಾರೆ!**

ಈ ದಿನಗಳಲ್ಲಿ ಸತ್ಯವೇದ ಸಂಘದವರು (ಬೈಬಲ್ ಸೊಸೈಟಿ) ತ್ರೈಯೇಕತ್ವವನ್ನು ಸೂಚಿಸಲು ಒಂದು ಗುರುತನ್ನು ಇಟ್ಟಿದ್ದಾರೆ **(logo)**
ಇದನ್ನು ಕಿಂಗ್ ಜೇಮ್ಸ್ ವರ್ಷನ್ ಸತವೇದದ ಶಿರೋನಾಮೆಯಲ್ಲಿ ಕಾಣಬಹುದು.




ಇದು ಮೂರು ಮೊಟ್ಟೆ ಆಕಾರದಲ್ಲಿ ಒಂದಕ್ಕೊಂದು ಕೂಡಿರುತ್ತದೆ. ಮೂರು ಬೇರೆ ಬೇರೆ ಅಂಡಾಕಾರಗಳಿವೆ. ಆದರೆ ಪೂರ್ತಿಯಾಗಿ ಒಂದಕ್ಕೊಂದು ಸೇರಿ ಒಂದೇ ಚಿಹ್ನೆಯಾಗಿದೆ



**ಇದನ್ನು ನೀವು ನೋಡಿದ್ದೀರಾ?**

ಇದನ್ನು **'ಟ್ರೈಕ್ವಿಟ್ರಾ'** **(TRIQUITRA)** ಎನ್ನುತ್ತಾರೆ!
ಇದು ಈ ಚಿತ್ರದಲ್ಲಿ ಇರುವ ಹಾಗೆ ಕಾಣುತ್ತದೆ!

**ಆದರೆ ಚಿತ್ರದ ಮೂಲಕ ದೇವರ ತ್ರೈಯೇಕತ್ವವನ್ನು ಕುರಿತು ಅರ್ಥಮಾಡಿಕೊಳ್ಳಬೇಕು ಅಥವಾ ದೇವರ ವಾಕ್ಯದಿಂದ ಅರ್ಥಮಾಡಿಕೊಳ್ಳಬೇಕಾ?**



ಹೌದು! ಸತ್ಯಕ್ಕೆ ಮೂಲವಾಗಿ ವಾಕ್ಯ (ಸತ್ಯವೇದ) ಇರಬೇಕು –
ಈ ವಿಷಯವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ –

## ಯೇಶಾಯ 8:20

"ದೇವರ ಉಪದೇಶವನ್ನೂ ದೇವರ ಬೋಧನೆಯನ್ನೂ ವಿಚಾರಿಸುವ ಎಂದು ಅವರು ಹೇಳದಿದ್ದರೆ ಅವರಿಗೆ ಎಂದಿಗೂ ಬೆಳಕಾಗುವದಿಲ್ಲ."

➡ ಇಲ್ಲಿ "**ಉಪದೇಶ**" ಎಂಬದು ಹಳೆಯ ಒಡಂಬಡಿಕೆಯನ್ನು ಸೂಚಿಸುತ್ತದೆ ಮತ್ತು

➡ "**ಬೋಧನೆ**" ಎಂಬದು ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ.

ಯಾವುದೇ ಬೋಧನೆಯು ಈ ಎರಡು ಒಡಂಬಡಿಕೆಯಲ್ಲಿ ಇಲ್ಲದಿದ್ದರೆ ಅದು ದೇವರಿಂದ ಬಂದ ಬೆಳಕು ಅಲ್ಲ ಅಂದರೆ ಅದು ಇರುಳು ಮತ್ತು ಅಸತ್ಯ!

## ನಾವು ದೇವರ ವಾಕ್ಯವನ್ನು ಕುರಿತು ಏನು ಓದುತ್ತೇವೆ?

ಹೌದು ಕೆಳಗಿನ ವಾಕ್ಯವನ್ನು ಓದೋಣ –

**ಯೋಹಾನ 17:17 - "ನಿನ್ನ ವಾಕ್ಯವೇ ಸತ್ಯವು"**

ಹೌದು! ಈ ತ್ರೈಯೇಕತ್ವದ ಬೋಧನೆಯನ್ನು ಅರ್ಥಮಾಡಿ ಕೊಳ್ಳಲು ನಾವು ಸತ್ಯವೇದವನ್ನು ಮೂಲವಾಗಿ ಇಟ್ಟುಕೊಳ್ಳೋಣ.

ಈಗ ನಾವು ಸತ್ಯವೇದದಲ್ಲಿ ತ್ರೈಯೇಕತ್ವದ ನಿಯಮವನ್ನು ಕುರಿತು ವಿವರಣೆ ಇದೆಯೇ ಎಂದು ಹುಡುಕಿ ನೋಡೋಣ.

ನಾವು ಮೊದಲೇ ನೋಡಿದ್ದೇನೆಂದರೆ ಸತ್ಯವೇದದಲ್ಲಿ ತ್ರೈಯೇಕತ್ವ ಎಂಬ ಪದವೇ ಇಲ್ಲ.

ಈಗ ಹೆಸರಾಂತವಾದ ಕೆಳಾಗಿನ ವಾಕ್ಯದಲ್ಲಿ ಓದೋಣ –

## 2 ಕೊರಿಂಥದವರಿಗೆ 13:14

"ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪವಿತ್ರಾತ್ಮನ ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ."

ಈ ವಾಕ್ಯವನ್ನು ಸಭೆ ಆರಾಧನೆಯ ಕೊನೆಯಲ್ಲಿ ಆಶೀರ್ವಾದ ವಚನವಾಗಿ ಉಪಯೋಗಿಸುತ್ತಾರೆ. ಈ ವಾಕ್ಯವು ತಂದೆ, ಮಗ ಮತ್ತು ಪವಿತ್ರಾತ್ಮ ಇವರನ್ನು ಕುರಿತು ಮಾತನಾಡುತ್ತದೆ –

ಆದರೆ ಇದರ ಅರ್ಥ ಮೂವರು ಒಂದಲ್ಲ!!

➡ ಇದಲ್ಲದೆ ತಂದೆಯನ್ನು ದೇವರೆಂದು ಸೂಚಿಸಿರುವುದನ್ನು ಗಮನಿಸಿರಿ!

## ಮೂವರು ಒಂದೇ ದೇವರೆಂದು ಹೇಳುವಾಗ, ಹೀಗೇಕೆ?

**ಆದ್ದರಿಂದ ಈ ವಾಕ್ಯವನ್ನು ತ್ರೈಯೇಕತ್ವಕ್ಕೆ ಆಧಾರವಾಗಿ ಪರಿಗಣಿಸಲಾಗುವುದಿಲ್ಲ**

ನಂತರ, ಇನ್ನೊಂದು ವಾಕ್ಯವನ್ನು ಕೆಳಗೆ ಓದುತ್ತೇವೆ –

**ಮತ್ತಾಯ 28:19**

**"ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ."**



## ತ್ರೈಯೇಕತ್ವವನ್ನು ನಿರೂಪಿಸುವದಕ್ಕಾಗಿ ಇದನ್ನು ಇನ್ನೊಂದು ವಾಕ್ಯವಾಗಿ ಉಪಯೋಗಿಸುತ್ತಾರೆ!

ಆದರೆ ಇಲ್ಲಿಯೂ ಸಹ ತಂದೆ, ಮಗ ಮತ್ತು ಪವಿತ್ರಾತ್ಮವು ಬೇರೆ ಬೇರೆ ಎಂದು ಒತ್ತಿ ಹೇಳಿರುವುದನ್ನು ನೋಡುತ್ತೇವೆ ಮತ್ತು ಮೂವರು ಒಂದೇ ಎಂದು ಹೇಳಲಿಲ್ಲ!

ಮತ್ತು ದೀಕ್ಷಾಸ್ನಾನ ಮಾಡಿಸುವ ವಿಧಾನ ಇದಾಗಿದ್ದರೆ, ಅಪೋಸ್ತಲರು ಮತ್ತು ಶಿಷ್ಯರು ಈ ವಿಧಾನವನ್ನು ಉಪಯೋಗಿಸಲಿಲ್ಲ ಎಂದು ಅಪೋ **2:38; 10:48; 19:5** ವಾಕ್ಯಗಳಲ್ಲಿ ನೋಡುತ್ತೇವೆ.

## ಹೀಗೇಕೆ?

ಹೌದು! ಇದು ಕರ್ತನಿಂದ ತನ್ನ ಶಿಷ್ಯರಿಗೆ ಕೊಟ್ಟಂತಹ ಕಟ್ಟಳೆಯಾಗಿತ್ತು!

**ಆದರೆ ಇದು ದೀಕ್ಷಾಸ್ನಾನವನ್ನು ಸೂಚಿಸುವುದೇ ಇಲ್ಲ!**

ಇಲ್ಲಿ ಯೇಸು ಗ್ರೀಕ ಪದ "ಬ್ಯಾಪ್‌ಟಿಸೋ" **(baptiso)** ವನ್ನು ಉಪಯೋಗಿಸುವುದನ್ನುನೋಡುತ್ತೇವೆ. ಇದರ ಅರ್ಥ "ಮುಳುಗಿಸುವದು." ಮತ್ತು ಇದು ಕ್ರಿಸ್ತರ ದೀಕ್ಷಾಸ್ನಾನ ಮಾತ್ರ ಎಂದಾಗುವುದಿಲ್ಲ. ಆದರೆ ಯಾವುದೇ ವಿಧವಾದ ಮುಳುಗುವುದನ್ನು ಸೂಚಿಸುತ್ತದೆ.

**ಉದಾ: ಸೋಪು ನೀರಿನಲ್ಲಿ ಕೊಳೆ ಬಟ್ಟೆಯನ್ನು ಮುಳುಗಿಸುವದು.**

ಹೌದು! ಯೇಸುವಿನ ಈ ವಾಕ್ಯಗಳಿಗೆ ಆಳವಾದ ಅರ್ಥವಿದೆ ಮತ್ತು ನಮ್ಮ ಕರ್ತನು ಬೇರೆ ವಿಧವಾದ ದೀಕ್ಷೆಯನ್ನು ಕುರಿತು ಮಾತನಾಡುತ್ತಾರೆ!

ಆದರೆ ಈ ದಿನ ಇದನ್ನು ಕುರಿತು ನಾವು ಅಭ್ಯಾಸ ಮಾಡುವುದಿಲ್ಲ!

**ಆದುದರಿಂದ ಇಲ್ಲಿಯು ಕೂಡ ತ್ರೈಯೇಕತ್ವವನ್ನು ಕುರಿತು ಬೋಧಿಸುವ ಯಾವ ಆದಾರವನ್ನು ನಾವು ಕಾಣುವುದಿಲ್ಲ**

**ಈಗ ತ್ರೈಯೇಕತ್ವವನ್ನು ಕುರಿತು ಹೇಳುವುದಕ್ಕೆ ಬೇರೆ ವಾಕ್ಯವಿದೆಯೇ??**

ಹೌದು! ಒಂದು ವಾಕ್ಯವು ತ್ರೈಯೇಕತ್ವದ ವಿಚಾರವನ್ನು ಸ್ಪಷ್ಟವಾಗಿ ಹೇಳುತ್ತದೆ ಇದನ್ನು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಯೋಹಾನ 5 :7**

**“ಇದಲ್ಲದೆ ಆತ್ಮನು ಸಾಕ್ಷಿಕೊಡುವವನಾಗಿದ್ದಾನೆ; ಆತ್ಮನು ಸತ್ಯಸ್ವರೂಪನೇ ಆತ್ಮ ನೀರು ರಕ್ತ ಎಂಬ ಮೂರು ಸಾಕ್ಷಿಗಳುಂಟು; ಈ ಮೂರು ಒಂದೇ ಅಭಿಪ್ರಾಯವಾಗಿ ಸಾಕ್ಷಿ ಹೇಳುತ್ತವೆ.”**

## ಈ ವಾಕ್ಯವನ್ನು ತ್ರೈಯೇಕತ್ವದ ಬೋಧನೆಯನ್ನು ನಿರೂಪಿಸುವದಕ್ಕಾಗಿ ಉಪಯೋಗಿಸುತ್ತಾರೆ

**ಆದರೆ ನಾವು ಏನು ನೋಡುತ್ತೇವೆ.......??**

ಈ ವಾಕ್ಯವನ್ನು ಕೆ.ಜೆ.ವಿ ಮತ್ತು ತಮಿಳು ಸತ್ಯವೇದದಲ್ಲಿ ಮಾತ್ರ ಕಾಣಬಹುದು!!


ಆದರೆ ಆಂಗ್ಲ ಎನ್.ಐ.ವಿ, ಆರ್.ಎಸ್.ವಿ., ಅಥವಾ ಕನ್ನಡ ಅಥವಾ ಹಿಂದಿ ಸತ್ಯವೇದಗಳಲ್ಲಿ ಕಾಣುವುದಿಲ್ಲ!

**ಏಕೆ ?.........**

**ಏಕೆಂದರೆ ಇದಕ್ಕೆ ಉತ್ತರವನ್ನು ಎನ್.ಐ.ವಿ ಸತ್ಯವೇದದ ಅಡಿಟಿಪ್ಪಣಿಯಲ್ಲಿ ವಿವರಿಸಲಾಗಿರುವುದನ್ನು ಕಾಣಬಹುದು –**

**"ಈ ವಾಕ್ಯವನ್ನು ಹದಿನಾರನೆಯ ದಶಕಕ್ಕೆ ಮೊದಲು ಯಾವುದೇ ಕೈಪಿಡಿಯಲ್ಲಿ ಕಾಣ ಬರುವುದಿಲ್ಲ."**

ಅಂದರೆ, ಈ ವಾಕ್ಯವನ್ನು ಸತ್ಯವೇದದಲ್ಲಿ ಸೇರಿಸಲಾಗಿದೆ.




ಸತ್ಯವೇದದ ನಿಜವಾದ ಒಂದು ಭಾಗ ಅಲ್ಲ– ಮೂಲ ಗ್ರಂಥದಲ್ಲಿ ಇಲ್ಲದ ಮಾತು ಸೇರಿಸುವದು

ಆದ್ದರಿಂದ ನಾವು ನೋಡಿದ್ದೇನೆಂದರೆ, ತ್ರೈಯೇಕತ್ವ ಎಂಬ ಪದ ಮತ್ತು ವಿಚಾರ ಅಥವಾ ನಿಯಮವು ತಂದೆ, ಮಗ ಮತ್ತು ಪವಿತ್ರಾತ್ಮ ಈ ಮೂವರು ಪ್ರತ್ಯೇಕ ವ್ಯಕ್ತಿಗಳು ಆದರೂ ಒಂದೇ ದೇವರು ಎಂಬುದನ್ನು ಸತ್ಯವೇದದಲ್ಲಿ ಎಲ್ಲಿಯೂ ಕಾಣುವುದಿಲ್ಲ ಮತ್ತು ಬೋಧಿಸುವದೂ ಇಲ್ಲ.

## ಹಾಗಾದರೆ, ಈ ವಿಷಯವಾಗಿ ಸತ್ಯವೇದವು ಏನು ಬೋಧಿಸುತ್ತದೆ....?

ಈ ವಿಷಯದಲ್ಲಿ ಸತ್ಯವನ್ನು ತಿಳಿದುಕೊಳ್ಳಲು ನಾವು ಪ್ರತ್ಯೇಕವಾಗಿ ತಂದೆ ಮತ್ತು ಮಗ ಮತ್ತು ಪವಿತ್ರಾತ್ಮವನ್ನು ಅಭ್ಯಾಸ ಮಾಡಬೇಕು ಮತ್ತು ದೇವರ ಪುಸ್ತಕದಲ್ಲಿ ಆಳವಾಗಿ ಹುಡುಕಬೇಕು......

ಹೀಗೆ ಹುಡುಕುವಾಗ ಸತ್ಯವು **"ಇಲ್ಲಿ ಸ್ವಲ್ಪವೂ ಅಲ್ಲಿ ಸ್ವಲ್ಪವೂ"** ಸಿಗುತ್ತದೆ.

ತಂದೆ ಮತ್ತು ಮಗ ಮತ್ತು ಪವಿತ್ರಾತ್ಮ – ಈ ಮೂವರು

**ಶಕ್ತಿ, ಅಧಿಕಾರ ಮತ್ತು ಮಹಿಮೆಯಲ್ಲಿ ಸರಿಸಮಾನರೆ?**

**ಸಮಕಾಲೀನ (ಸಹ – ನಿತ್ಯಬಾಳ್ವಿಕೆ)ಯಲ್ಲಿ ಅಳಿಯದೆ ಮತ್ತು ಆರಂಭವಿಲ್ಲದೆ ಇರುವರೆ?**


## ಹೌದು! ಈ ಬೋಧನೆಯನ್ನೇ ಎಲ್ಲಾ ಕಡೆಗಳಲ್ಲಿ ಕ್ರೈಸ್ತ ಬೋಧಕರು ಸಾಮಾನ್ಯವಾಗಿ ಬೋಧಿಸುತ್ತಾರೆ.

ಇದಕ್ಕೆ ಉತ್ತರವನ್ನು ನಾವು ಮೂರು ಭಾಗಗಳ ಅಭ್ಯಾಸದಲ್ಲಿ ನೋಡಲಿದ್ದೇವೆ. ಮೊದಲನೆಯದಾಗಿ ನಾವು ಪವಿತ್ರಾತ್ಮನನ್ನು ಕುರಿತು ಅಭ್ಯಾಸಿಸೋಣ –

# ಪವಿತ್ರಾತ್ಮ

ಪವಿತ್ರಾತ್ಮನನ್ನು ತ್ರೈಯೇಕತ್ವದ ಮೂರನೆ ಒಂದು ಭಾಗವಾಗಿ ಹೇಳಲಾಗುತ್ತದೆ ಮತ್ತು ಸ್ವತಃ ದೇವರು ಎಂದು ಪರಿಗಣಿಸಲಾಗುತ್ತದೆ!

ಪವಿತ್ರಾತ್ಮನನ್ನು ಒಬ್ಬ ವ್ಯಕ್ತಿಯಾಗಿ ತಂದೆ ಮತ್ತು ಮಗನಂತೆಯೇ ಪರಿಗಣಿಸಲಾಗುತ್ತದೆ ಈ ಪವಿತ್ರಾತ್ಮ ನನ್ನು ಕುರಿತು ಅನೇಕ




ಪುಸ್ತಕಗಳನ್ನು ಬರೆಯಲಾಗಿದೆ.

**ಉದಾ: ಬೆನ್ನಿ ಹಿನ್‌ರವರು ಬರೆದಿರುವ "ಗುಡ್ ಮಾರ್‌ನಿಂಗ್ ಹೋಲಿ ಸ್ಪಿರಿಟ್".**

**ಇದು ನಿಜವೇ?**

**ಸತ್ಯವೇದವು ಏನು ಬೋಧಿಸುತ್ತದೆ?**

**ಯೇಸು ಪವಿತ್ರಾತ್ಮನನ್ನು ಕುರಿತು ಏನು ಹೇಳಿದ್ದಾರೆ ಮತ್ತು ಬೋಧಿಸಿದ್ದಾರೆ?**

ಆತನು ನುಡಿದ ಸ್ವಂತ ವಾಕ್ಯದಿಂದ ಓದಿ ನೋಡೋಣ –

**ಯೋಹಾನ 17:3**

**"ಒಬ್ಬನೇ ಸತ್ಯದೇವರಾಗಿರುಬ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನೂ ತಿಳಯುವದೇ ನಿತ್ಯಜೀವವು."**



ಇಲ್ಲಿ ನಿತ್ಯ ಜೀವಕ್ಕೆ ಬೇಕಾದ ಬೀಗದ ಕೈ ಮತ್ತು ಮಾರ್ಗವನ್ನು ಯೇಸು ತಿಳಿಸುತ್ತಿದ್ದಾರೆ ಮತ್ತು ಆತನು ಹೇಳುವುದೇನೆಂದರೆ ಇದರಲ್ಲಿ ತಂದೆ ಮತ್ತು ಮಗನನ್ನು **"ತಿಳಿದುಕೊಳ್ಳುವದು"** ಸಹ ಸೇರಿದೆ.

**ಹಾಗಾದರೆ ಪವಿತ್ರಾತ್ಮನ ಬಗ್ಗೆ ಏನು?**

**ನಿತ್ಯ ಜೀವವನ್ನು ಹೊಂದಲು ಪವಿತ್ರಾತ್ಮನ ಬಗ್ಗೆ ಜ್ಞಾನವು ಸಹ ಅವಶ್ಯವಲ್ಲವೆ?**



ಆದರೆ ಯೇಸು ಪವಿತ್ರಾತ್ಮನ ಬಗ್ಗೆ ಇಲ್ಲಿ ಏನೂ ಸಹ ಹೇಳಲಿಲ್ಲ!

## ಹೀಗೇಕೆ? ಇದಕ್ಕೆ ಕಾರಣವೇನು? ಆತನು ಮರೆತುಬಿಟ್ಟನೆ?

ಇದಲ್ಲದೆ ಯೋಹಾನ 17ನೇ ಅಧಿಕಾರದಲ್ಲಿ, ಯೇಸುವಿನ ಉದ್ದವಾದ ಪ್ರಾರ್ಥನೆ ದಾಖಲಿಸಿರುವುದನ್ನು ನೋಡುತ್ತೇವೆ.

**ಎಷ್ಟು ಸಾರಿ ಯೇಸು ಅತನ ಉದ್ದನೆಯ ಪ್ರಾರ್ಥನೆಯಲ್ಲಿ ಪವಿತ್ರಾತ್ಮನ ಹೆಸರು ಹೇಳುವುದನ್ನು ನೋಡುತ್ತೇವೆ?**

ನೋಡೋಣ.....

**(ದಯವಿಟ್ಟು ಪೂರ್ತಿ ಅಧ್ಯಾಯ ಓದಿರಿ)**

ನಮಗೆ ಇದು ಅಚ್ಚರಿ ಎನಿಸುತ್ತದೆ, ಯೇಸು ಕ್ರಿಸ್ತನು ಕೇವಲ ಒಂದು ಬಾರಿಯು ಸಹ ಪವಿತ್ರಾತ್ಮನ ಹೆಸರನ್ನು ಹೇಳಲಿಲ್ಲ ಆದರೆ ತಂದೆಯ ಹೆಸರನ್ನು ಆರು ಸಾರಿ ಹೇಳಿರುವುದನ್ನು ನೋಡುತ್ತೇವೆ!

**(ಯೋಹಾನ 17:1, 5, 11, 21, 24 ಮತ್ತು 25 ನ್ನು ಓದಿರಿ)**

### ಇದೇನಿದು?

ಪೆಂಟಕೋಸ್ಟಲ್ ಚಳವಳಿಯ ಈ ದಿನಗಳಲ್ಲಿ ಇದನ್ನು ಓದುವಾಗ ಪವಿತ್ರಾತ್ಮನಿಗೆ ಕೊಟ್ಟಿರುವ ಮುಖ್ಯತ್ವವನ್ನು ನೋಡುವಾಗ ಆಶ್ಚರ್ಯವಾಗುವುದಿಲ್ಲವೆ! (**ತಮಿಳಿನಲ್ಲಿ "ಪರಿಶುದ್ಧ ಆವಿಯಾನವರ್"**)

**ತಂದೆಯಾದ ದೇವರನ್ನು ಪ್ರಾರ್ಥಿಸಿ, ಸ್ತುತಿಸಿದ ಹಾಗೆ ಯೇಸು ಪವಿತ್ರಾತ್ಮನನ್ನು ಪ್ರಾರ್ಥಿಸಿ ಸ್ತುತಿಸಿದರೆ?**

## ಇದಕ್ಕೆ ಉತ್ತರ ಇಲ್ಲ!

**ಇದಕ್ಕೆ ಕಾರಣ ಏನಾಗಿರಬಹುದು?**

ಇದಕ್ಕೆ ಉತ್ತರವನ್ನು ಸ್ವತಃ ಯೇಸು ಹೇಳಿರುವುದನ್ನು ಕೆಳಗಿನ ವಾಕ್ಯದಲ್ಲಿ ಓದೋಣ –

**ಲೂಕ 24:49**

"...ಇಗೋ ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ ಎಂದು ಹೇಳಿದನು."

ಪವಿತ್ರಾತ್ಮನನ್ನು **"ಮೇಲಣ ಲೋಕದ ಶಕ್ತಿ"** ಎಂದು ಯೇಸು ಸ್ಪಷ್ಟವಾಗಿ ತಿಳಿಸುವುದನ್ನು ನೋಡುತ್ತೇವೆ.

## ಪವಿತ್ರಾತ್ಮನು ದೇವರ ಶಕ್ತಿ - ಇನ್ನೊಂದು ವ್ಯಕ್ತಿ ಅಲ್ಲ

ಅಪೊಸ್ತಲನಾದ ಪೇತ್ರನ ಮೂಲಕ ಇದನ್ನು ಇನ್ನೂ ದೃಢವಾಗುವುದನ್ನು ಮುಂದಿನ ವಾಖ್ಯದಲ್ಲಿ ಓದುತ್ತೇವೆ –

**ಅಪೋಸ್ತಲರ ಕೃತ್ಯಗಳು 2:33**

**"ಅತನು ದೇವರ ಬಲಗೈಯಿಂದ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದಾನವಾಗಿದ್ದ ಪವಿತ್ರಾತ್ಮ ವರವನ್ನು ತಂದೆಯಿಂದ ಹೊಂದಿ ನೀವು ನೋಡಿ ಕೇಳುವುದನ್ನು ಸುರಿಸಿದ್ದಾನೆ."**

ಪವಿತ್ರಾತ್ಮವು ದೇವರ ಶಕ್ತಿ ಎಂಬುವದನ್ನು ಈ ವಾಕ್ಯದಲ್ಲಿ ಸ್ಪಷ್ಟವಾಗಿ ಅರ್ಥಮಾದಿಕೊಳ್ಳಬಹುದಾಗಿದೆ–

**"ಆತನು ನೋಡಿ ಕೇಳುವುದನ್ನು ಸುರಿಸಿದ್ದಾನೆ"**

ನಿಜವಾಗಿಯು ಪವಿತ್ರಾತ್ಮವು ಒಬ್ಬ ವ್ಯಕ್ತಿಯಗಿದ್ದಿದರೆ "ಕೇಳುವುದನ್ನು" ಎಂಬ ಪದದ ಬಳಕೆಯು ತುಂಬ ಅವಮಾನಕರಿಯಗಿರುವುದು!

**ಅದರೆ ಅಪೋಸ್ತಲನಾದ ಪೇತ್ರನಿಗೆ ಇದು ಚೆನ್ನಾಗಿ ತಿಳಿದಿತ್ತು!**

ಆತನು ಆಗ ತಾನೆ ಪವಿತ್ರಾತ್ಮದಿಂದ ತುಂಬಿದ್ದನು.

**ಅದು ಪಂಚಶತ್ತಮ ದಿನವಾಗಿತ್ತು!!**



ಈ ದೇವರ ಶಕ್ತಿಯನ್ನು ಹಳೆಯ ಒಡಂಬಡಿಕೆಯಲ್ಲಿ ದೇವರ ಆತ್ಮವೆಂದು ಹೇಳಲಾಗಿದೆ.

"ಆತ್ಮ" ಎಂಬ ಪದವು



ಇಬ್ರಿಯದಲ್ಲಿ....

**H-7307**

**“ರೂವಾಖ್”**

ಗ್ರೀಕ್ ನಲ್ಲಿ.....

**G-4151**

**“ನ್ಯೂಮಾ”**



**ಇವೆರಡರ ಅರ್ಥ ವಾಯು ಅಥವಾ ಗಾಳಿ ಆದ್ದರಿಂದ.**

ಪಂಚಶತ್ತಮ ದಿನದ ಹಬ್ಬದಂದು ಪವಿತ್ರಾತ್ಮವು ಹೇಗೆ ಸುರಿದು ಬಂತು ಎಂದು ಮುಂದಿನ ವಾಕ್ಯದಲ್ಲಿ ಓದುತ್ತೇವೆ –

**ಅಪೊಸ್ತಲರ ಕೃತ್ಯಗಳು 2:2**

“.....ಆಗ ಬಿರುಗಾಳಿ ಬೀಸುತ್ತದೋ......”

ಹೌದು! ಈ ದೇವರ ಮಹಾಶಕ್ತಿಯಾದ ಪವಿತ್ರಾತ್ಮವು ಅನೇಕ ರೀತಿಯಲ್ಲಿ ವ್ಯಕ್ತವಾಗುವದನ್ನು

ಕೆಳಾಗೆ ಕೊಟ್ಟಿರುವಂತೆ ನೋಡುತ್ತೇವೆ –


## ಸೃಷ್ಟಿಸುವಂತಹ ಶಕ್ತಿ

**ಆದಿಕಾಂಡ 1:2**

**“ಭೂಮಿಯು ಕ್ರಯವಿಲ್ಲದೆಯೂ ಬರಿದಾಗಿಯೂ ಇತ್ತು; ಆದಿ ಸಾಗರದ ಮೇಲೆ ಕತ್ತಲಿತ್ತು; ದೇವರಾತ್ಮವು ಜಲ ಸಮೂಹಗಳ ಮೇಲೆ ಚಲಿಸುತ್ತಿತ್ತು.”**

ಹೌದು! ಕ್ರಮವಿಲ್ಲದೆಯೂ ಬಂದಾಗಿಯೂ ಇದ್ದ ಭೂಮಿಯಲ್ಲಿ ವಾಸಿಸತಕ್ಕ ಸ್ಥಿತಿಯನ್ನು ಉಂಟುಮಾಡುವ ಕೆಲಸವು ಈ ದೇವರ ಮಹಾಶಕ್ತಿಗೆ ಇದೆಯೆಂದು ಇದು ಸೂಚಿತವಾಗಿದೆ!

## ಜ್ಞಾನ



**ಧರ್ಮೋಪದೇಶ ಕಾಂಡ 34:9**

"ಮೋಶೆಯ ನೂನನ ಮಗನಾದ ಯೆಹೋಶುವನ ಮೇಲೆ ಕೈಯಿಟ್ಟದರಿಂದ ಅವನು ಜ್ಞಾನವರಸಂಪನ್ನನಾದನು ಯೆಹೋವನು ಮೋಶೆಗೆ ಕೊಟ್ಟ ಆಜ್ಞೆಗೆ ಅನುಸಾರವಾಗಿ ಇಸ್ರಾಯೇಲ್ಯರು ಯೆಹೋಶುವನ ಮಾತಿನ ಪ್ರಕಾರ ನಡೆದರು".

ಇಲ್ಲಿಯೂ ಸಹ ನಾವು ನೋದುವುದೇನೆಂದರೆ, ಮೋಶೆಯ ನಂತರ ನೂನನ ಮಗನಾದ ಯೆಹೋಶುವನು "ಪವಿತ್ರಾತ್ಮ ಜ್ಞಾನವನ್ನು" ಪಡೆದು ಇಸ್ರಾಯೇಲ್ ಜನರನ್ನು ನಡೆಸಿದ್ದಕ್ಕೆ ಸೂಚಿತವಾಗಿದೆ!

## ದೈಹಿಕ ಶಕ್ತಿ



**ನ್ಯಾಯಸ್ಥಾಪಕರು 14:6**

“ಅವನ ಕೈಯಲ್ಲಿ ಏನೂ ಇಲ್ಲದಿದ್ದರೂ ಯೆಹೋವನ ಆತ್ಮವು ಅವನ ಮೇಲೆ ಫಕ್ಕನೆ ಬಂದದರಿಂದ ಆ ಸಿಂಹವನ್ನು ಹೋತಮರಿಯನ್ನೋ ಎಂಬಂತೆ ಸೀಳಬಿಟ್ಟನು. ಈ ಸಂಗತಿಯನ್ನು ತಂದೆತಾಯಿಗಳಿಗೆ ತಿಳಿಸಲಿಲ್ಲ."

## ನ್ಯಾಯಸ್ಥಾಪಕರು 16:2-3

**"ಸಂಸೋನನು ಬಂದಿರುವದು ಗಾಜದವರಿಗೆ ಗೊತ್ತಾಗಲು ಅವರು ಬಂದು ಅವನನ್ನು ಸುತ್ತಿಕೊಂಡರು; ಸೂರ್ಯೋದಯವಾಗುತ್ತಲೇ ಅವನನ್ನು ಕೊಂದುಹಾಕೋಣ ಎಂದುಕೊಂಡು ರಾತ್ರಿಯೆಲ್ಲಾ ಊರುಬಾಗಲಲ್ಲಿ ಹೊಂಚಿನೋಡುತ್ತಾ ಸುಮ್ಮಸಿದ್ದರು. ಸಂಸೋನನು ಮಲಗಿ ಮಧ್ಯರಾತ್ರಿಯಲ್ಲೆದ್ದು ಊರು ಬಾಗಲಿನ ಕದಗಳನ್ನು ಕಿತ್ತು ಹೆಗಲ ಮೇಲೆ ಹೊತ್ತು ಕೊಂಡು ಹೋಗಿ ಹೆಬ್ರೋನಿನ ಎದುರಿಗಿರುವ ಪರ್ವತದ ಶಿಖರದ ಮೇಲೆ ಇಟ್ಟನು."**

ಹೌದು! ಇಲ್ಲಿ ದೇವರ ಪವಿತ್ರಾತ್ಮವು ಸಂಸೋನನಿಗೆ ಅತ್ಯಧಿಕ ಶಕ್ತಿಯನ್ನು ಕೊಟ್ಟು ಆದಿಮಾನವನಂತೆ ಬಲಹೊಂದಿ ಆತನು ನಂಬಲು ಅಸಾಧ್ಯವಾದ ಸಾಹಸ ಕಾರ್ಯಗಳನ್ನು ಮಾಡಿದನೆಂದು ವಾಕ್ಯದಲ್ಲಿ ದಾಖಲಾಗಿರುವುದನ್ನು ಈಗ ತಾನೆ ಓದಿದೆವು.

**ಆ ಊರ ಬಾಗಿಲಿನ ಕದಗಳ ಭಾರವನ್ನು ಸ್ವಲ್ಪ ಊಹಿಸಿನೋಡಿ!**



# ಶಿಲ್ಪಶಾಸ್ತ್ರ ಜ್ಞಾನ ಮತ್ತು ಪರಿಣಿತ

## ವಿಮೋಚನಕಾಂಡ 31:2,3

**"ಯೆಹೋವನು ಮೋಶೆಗೆ ಹೀಗಂದನು–ವಿಚಿತ್ರವಾಗಿ ನಯವಾದ ಕೆಲಸಗಳನ್ನು ಕಲ್ಪಿಸುವದಕ್ಕೂ ಚಿನ್ನ ಬೆಳ್ಳಿತಾಮ್ರಗಳಿಂದ ಕೆಲಸ ನಡಿಸುವದಕ್ಕೂ, ರತ್ನಗಳನ್ನು ಕೆತ್ತುವದಕ್ಕೂ ಮರದಲ್ಲಿ ವಿಚಿತ್ರವಾಗಿ ಕೆತ್ತನೆಯ ಕೆಲಸವನ್ನು ಮಾಡುವದಕ್ಕೂ ಇವೇ ಮೊದಲಾದ ಸಮಸ್ತ ಶೃಂಗಾರವಾದ ಕೆಲಸವನ್ನು ಮಾಡುವದಕ್ಕೂ ನಾನು ಯೆಹುದಕುಲದವನಾದ ಹೂರನ ಮೊಮ್ಮಗನೂ ಊರಿಯ ಮಗನೂ ಆಗಿರುವ ಬೆಚಲೇಲನೆಂಬವನನ್ನು ಗೊತ್ತುಮಾಡಿದ್ದೇನೆ."**

ಇಲ್ಲಿ ನಾವು ಓದುವದೇನೆಂದರೆ ದೇವರು ಮೋಶೆಗೆ ಗುಡಾರವನ್ನು ಕಟ್ಟಲು ಆಜ್ಞಾಪಿಸಿದಾಗ ಇಸ್ರಾಯೇಲ್ಯರಲ್ಲಿ ಯಾರಿಗೂ ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣ ಮತ್ತು ಮರಗಳಲ್ಲಿ ಕೆಲಸ ಮಾಡುವ ಕುಶಲತೆ ಇರಲಿಲ್ಲ.

ಆದ್ದರಿಂದ ದೇವರು

ಬೆಜಲೇಲನೆಂಬವನನ್ನು ಆರಿಸಿಕೊಂಡು ದೇವರ ಆತ್ಮವನ್ನು ಸುರಿಸಿದಾಗ ತನಗೆ ತಾನೆ ಈ ಎಲ್ಲಾ ಕುಶಲತೆಯನ್ನು ಹೊಂದಿಕೊಳ್ಳುತ್ತಾನೆ.



**ಇದು ಪವಿತ್ರಾತ್ಮದಿಂದ ಉಂಟಾಗುತ್ತದೆ! ನಿಶ್ಚಯವಾಗಿಯೂ ಒಬ್ಬ ವ್ಯಕ್ತಿಯಿಂದ ತುಂಬಲು ಸಾಧ್ಯಾವಿಲ್ಲ!!**

# ಪ್ರವಾದನಾ ಶಕ್ತಿ

**ಅಪೋಸ್ತಲರ ಕೃತ್ಯಗಳು 2:18**

**"ಆ ದಿನಗಳಲ್ಲಿ ನನ್ನ ದಾಸದಾಸಿಯರ ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು; ಅವರೂ ಪ್ರವಾದಿಸುವರು."**

## ಪ್ರವಾದನೆ ಎಂದರೇನು?

**ಇದು ಜನರ ಭವಿಷ್ಯದಲ್ಲಿನ ತೊಂದರೆಗಳು ಮತ್ತು ಅವರ ಜೀವಿತದ ವಿಷಯ ತಿಳಿಸುವದೆ ಪ್ರವಾದನೆಯಾ?**

**ಇಲ್ಲ!**


ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

**ಪ್ರಕಟನೆ 19:10: "ಯೇಸುವಿನ ವಿಷಯವಾದ ಸಾಕ್ಷಿಯು ಪ್ರವಾದನೆಯ ಅತ್ಮವೇ"**


ಹೌದು! ಯೀಸುವಿನ ಸಾಕ್ಷಿಯು ಸತ್ಯವೇದದಲ್ಲಿ ಎಲ್ಲಾ ಕಡೆಯೂ ಇದೆ.

ಆದದರಿಂದ ಸತ್ಯವೇದದ ವಿವರಣೆಯ ಅರ್ಥ ಮತ್ತು ಅದರ ವ್ಯಾಖ್ಯಾನ ಮತ್ತು ಯೇಸುವಿನ ಸಾಕ್ಷಿಯೇ ಪ್ರವಾದನೆಯ ಅರ್ಥವಾಗಿದೆ.

ನಂತರ ನಾವು ಹೀಗೆ ನೋಡುತ್ತೇವೆ–



# ಗುಣಪಡಿಸುವ ಶಕ್ತಿ




**1 ಕೊರಿಂತದವರಿಗೆ 12:9**

**"ಒಬ್ಬನಿಗೆ ಆ ಆತ್ಮನಿಂದಲೇ ನಂಬಿಕೆಯು, ಒಬ್ಬನಿಗೆ ಆ ಒಬ್ಬ ಆತ್ಮನಿಂದಲೇ ನಾನಾ ರೋಗಗಳನ್ನು ವಾಸಿಮಾಡುವ ವರವು...."**

ಹೌದು! ಪವಿತ್ರಾತ್ಮದ ಮೂಲಕ ದೈಹಿಕ ಮತ್ತು ಮಾನಸಿಕ ರೋಗಗಳಿಂದ ವಾಸಿ ಮಾಡುವ ಶಕ್ತಿಯಾಗಿದೆ.

# ಅನ್ಯಭಾಷೆಗಳಲ್ಲಿ ಮಾತನಾಡುವ ಆತ್ಮ

**1 ಕೊರಿಂತದವರಿಗೆ 12:10**

**"ಒಬ್ಬನಿಗೆ ಮಹತ್ತುಗಳನ್ನು ಮಾಡುವ ವರವು, ಒಬ್ಬನಿಗೆ ಪ್ರವಾದನೆಯ ವರವು ಒಬ್ಬನಿಗೆ ಸತ್ಯಾಸತ್ಯಾತ್ಮಗಳನ್ನು ವಿವೇಚಿಸುವ ವರವು, ಒಬ್ಬನಿಗೆ ವಿವಿದ ವಾಣಿಗಳನ್ನಾಡುವ ವರವು, ಒಬ್ಬನಿಗೆ ವಾಣಿಗಳ ಅರ್ಥವನ್ನು ಹೇಳುವ ವರವು ಕೊಡಲ್ಪಡುತ್ತವೆ."**

ಇಲ್ಲಿ ಬೇರೆ ಭಾಷೆಗಳನ್ನು ಕಲಿತುಕೊಳ್ಳದೆಯೇ ಅಥವಾ ಕಲಿತುಕೊಳ್ಳುವ ಅವಶ್ಯವಿಲ್ಲದೆಯೇ ಇದ್ದಕ್ಕಿದ್ದಂತೆ ಬೇರೆ ಭಾಷೆಗಳನ್ನು ಮಾತನಾಡುವ ಸಾಮರ್ಥ್ಯ ಉಂಟಾಗುತ್ತದೆ.

ಹೀಗೆ... ಏಕೆಂದರೆ ಬೇರೆ ಬೇರೆ ಭಾಷೆಗಳನ್ನು ಮಾತನಾಡುವ ಅನ್ಯ ಜನಾಂಗದ

ದೇಶಗಳಲ್ಲಿ ಸುವಾರ್ತೆಯನ್ನು ಸಾರುವದಕ್ಕಾಗಿದೆ.

**ಉದಾ: ಭಾರತ ದೇಶ**

ಇಂತಹ ಮಹತ್ತಾದ ದೇವರ ಶಕ್ತಿಯಾದ ಪವಿತ್ರಾತ್ಮವನ್ನು ಯೇಸುವಿನ ಮೇಲೆ ಅಳತೆಯಿಲ್ಲದೆ ಸುರಿಸಲಾಯಿತು!

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



**ಯೋಹಾನ 3:34**

**“ಹೇಗಂದರೆ ದೇವರು ಯಾರನ್ನು ಕಳುಹಿಸಿದ್ದಾನೋ ಆತನಿಗೆ ಆತ್ಮವರವನ್ನು ಅಳತೆಮಾಡದೆ ಆನುಗ್ರಹಿಸುವದರಿಂದ ಆತನು ದೇವರ ಮಾತುಗಳನ್ನೇ ಆಡುತ್ತಾನೆ.”**

ನಿಶ್ಚಯವಾಗಿಯೂ ಒಬ್ಬ ವ್ಯಕ್ತಿಯನ್ನು "**ಅಳತೆ ಮಾಡದೆ ಅನುಗ್ರಹಿಸುವದರಿಂದ**" ಎಂದು ಹೇಳಲಾಗದು!!

ಯೇಸುವಿನ ಮೇಲೆ ಪವಿತ್ರಾತ್ಮವನ್ನು ಸುರಿಸುವ ವಿವರಗಳನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಯೆಶಾಯ 11:1,2

"ಇಷಯನ ಬುಡದಿಂದ ಒಂದು ಚಿಗುರು ಒಡೆಯುವದು, ಅದರ ಬೇರಿನಿಂದ ಹೊರಟ ತಳಿರು ಫಲಿಸುವದು; ಆ ಅಂಕುರದ ಮೇಲೆ ಜ್ಞಾನವಿವೇಕದಾಯಕ ಆತ್ಮ, ಅಂತು ಯೆಹೋವನ ಆತ್ಮವೇ ನೆಲೆಗೊಂಡಿರುವದು."

**ಈ ಆತ್ಮವನ್ನೇ ಯೇಸುವಿನ ಮೇಲೆ ಸುರಿದದ್ದು!**

**ನಿಶ್ಚಯವಾಗಿಯೂ ಒಂದು ವೇಳೆ ಪವಿತ್ರಾತ್ಮವು ಒಬ್ಬ ವ್ಯಕ್ತಿಯಾಗಿದ್ದರೆ ಯೇಸುವು ಇನ್ನೊಬ್ಬ ವ್ಯಕ್ತಿಯನ್ನು ಹೇಗೆ ಹೊಂದಲು ಸಾಧ್ಯ?**

## ಮತ್ತು ಒಬ್ಬ ವ್ಯಕ್ತಿಯನ್ನು "ಅಳತೆಯಿಂದ ಸುರಿಸಲು" ಸಾಧ್ಯವೆ?

ಇದಲ್ಲದೆ ಪವಿತ್ರಾತ್ಮವು ಒಬ್ಬ ವ್ಯಕ್ತಿ ಅಲ್ಲ, ದೇವರ ಶಕ್ತಿ ಎಂದು ಅಪೊಸ್ತಲರಿಗೆ ಮತ್ತು ಆದಿ ಸಭೆಯವರಿಗೂ ಈ ಸತ್ಯ ಗೊತ್ತಿತ್ತು.

ಇವರೆಲ್ಲರ ಪತ್ರಿಕೆಗಳ ಆರಂಭದಲ್ಲಿ ಇವರು ಸ್ವಾಗತಿಸುವುದನ್ನು ಗಮನಿಸಿರಿ!!

### 1 ಕೊರಿ 1:3

"ನಮ್ಮ ತಂದೆಯಾಗಿರುವ ದೇವರಿಂದಲೂ ಕರ್ತನಾದ ಯೇಸುಕ್ರಿಸ್ತನಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ."

### ಗಲಾತ್ಯದ 1:3

"ನಮ್ಮ ತಂದೆಯಾಗಿರುವ ದೇವರಿಂದಲೂ ನಮ್ಮ ಕರ್ತನಾದ ಯೇಸುಕ್ರಿಸ್ತನಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ."

### ಫಿಲಿಪ್ಪಿ 1:2

"ನಮ್ಮ ತಂದೆಯಾಗಿರುವ ದೇವರಿಂದಲೂ ಕರ್ತನಾದ ಯೇಸುಕ್ರಿಸ್ತನಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ."

### ಯಾಕೋಬ 1:1

"ದೇವರಿಗೂ ಕರ್ತನಾದ ಯೇಸುಕ್ರಿಸ್ತನಿಗೂ ದಾಸನಾಗಿರುವ ಯಾಕೋಬನು ಅನ್ಯದೇಶಗಳಲ್ಲಿ ಚದರಿರುವ [ಇಸ್ರಾಯೇಲ್] ಹನ್ನೆರಡು ಕುಲದವರಿಗೆ ಬರೆಯುವದು"

**2 ಪೇತ್ರನು 1:2**


**"ದೇವರ ವಿಷಯವಾಗಿಯೂ ನಮ್ಮ ಕರ್ತನಾದ ಯೇಸುವಿನ ವಿಷಯವಾಗಿಯೂ ಪರಿಜ್ಞಾನವು ನಿಮಗೆ ಉಂಟಾಗುವದರಲ್ಲಿ ಕೃಪೆಯೂ ಶಾಂತಿಯೂ ನಿಮಗೆ ಹೆಚ್ಚೆಚ್ಚಾಗಿ ದೊರೆಯಲಿ."**

**1 ಯೋಹಾನ 1:3**

**"…..ನಮಗಿರುವ ಅನ್ಯೋನ್ಯತೆಯು ತಂದೆಯ ಸಂಗಡಲೂ ಆತನ ಮಗನಾದ ಯೇಸು ಕ್ರಿಸ್ತನ ಸಂಗಡಲೂ ಇರುವಂಥದು."**

ಹೌದು! ತಂದೆ ಮತ್ತು ಮಗನು ಮಾತ್ರಕ್ಕೆ ಸ್ಪಷ್ಟವಾದ ಸೂಚಿತ ವಾಕ್ಯಗಳಾಗಿವೆ ಪವಿತ್ರಾತ್ಮವನ್ನು ಕುರಿತು ಇಲ್ಲಿ ಕಾಣೆಯಾಗಿದೆ ಏಕೆಂದರೆ "ಪವಿತ್ರಾತ್ಮ ಒಬ್ಬ ವ್ಯಕ್ತಿ ಅಲ್ಲ!!

**ಆದ್ದರಿಂದ ಸ್ವಾಗತ ವಾಕ್ಯವು ಪವಿತ್ರಾತ್ಮನ ಹೆಸರಿನಲ್ಲಿ ಎಂದಿಗೂ ಇರಲಿಲ್ಲ!**



ಯೇಸು ತಾನೇ ಹೇಳಿರುವ ವಾಕ್ಯವನ್ನು ಗಮನಿಸಿ–

**ಯೋಹಾನ 14:1**

**"ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ"**

**ಪವಿತ್ರಾತ್ಮದ ಬಗ್ಗೆ ಹೇಳುವುದು ಏಕೆ ಕಾಣೆಯಾಗಿದೆ!**



**ಪವಿತ್ರಾತ್ಮ ಮೇಲೆಯೂ ನಂಬಿಕೆ ಇಡಿರಿ ಎಂದು ಏಕೆ ಯೇಸು ಹೇಳುತ್ತಿಲ್ಲ?**

ಏಕೆಂದರೆ ಪವಿತ್ರಾತ್ಮ ಒಬ್ಬ ವ್ಯಕ್ತಿ ಅಲ್ಲವೆ ಅಲ್ಲ ಎಂದು ಸ್ಪಷ್ಟವಾಗಿ ನೋಡಿದೆವು–

**ಆದರೆ ದೇವರಿಂದ ಬಂದಂತಹ ಮತ್ತು ದೇವರ ಶಕ್ತಿಯಾಗಿದೆ!**

**ಸತ್ಯವೇದದಲ್ಲಿ ಈ ಮಹಾ ಸತ್ಯವನ್ನು ಅರಿತುಕೊಂಡ ಮೇಲೆ ನಮಗೆ ಬರುವ ಪ್ರಶ್ನೆ ಏನೆಂದರೆ -**

**"ಪವಿತ್ರಾತ ಒಬ ವ್ಯಕಿ ಎಂಬ ಈ ಆಲೋಚನೆ ಎಲ್ಲಿಂದ ಬಂತು" ?**

ಇದಕ್ಕೆ ಉತ್ತರವನ್ನು ಯೋಹಾನನು ಬರೆದ ಸುವಾರ್ತೆಯಲ್ಲಿ ಓದುತ್ತೇವೆ –

**ಯೋಹಾನ 16:7; 14:16,26: 15:26**

"ಆದರೂ ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ, ಕೇಳಿರಿ; ನಾನು ಹೋಗುವದು ನಿಮಗೆ ಹಿತಕರವಾಗಿದೆ;ಹೇಗೆಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವುದಿಲ್ಲ; ನಾನು ಹೋದರೆ ಆತನ್ನನ್ನು ನಿಮ್ಮ ಬಳಿಗೆ ಕಳುಹಿಸಿಕೊಡುತ್ತೇನೆ"

"ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು."

"ಆದರೆ ಆಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವೆನು."

"ಆದರೆ ತಂದೆಯ ಬಳಿಯಿಂದ ನಾನು ನಿಮಗೆ ಕಳುಹಿಸಿಕೊಡುವ ಸಹಾಯಕನು, ಅಂದರೆ ತಂದೆಯ ಬಳಿಯಿಂದ ಹೊರಡುವ ಸತ್ಯದ ಆತ್ಮನು, ಬಂದಾಗ ಆತನು ನನ್ನನ್ನು ಕುರಿತು ಸಾಕ್ಷಿಹೇಳುವನು."

ಹೌದು! ಇಲ್ಲಿ ದೇವರ ಪವಿತ್ರಾತ್ಮವನ್ನು

"ಆತನು" ಮತ್ತು "ಸಹಾಯಕನು" ಮತ್ತು "ಆಲೋಚಕನು" (ಎನ್.ಐ.ವಿ ಸತ್ಯವೇದದಲ್ಲಿ) ಎಂದು ಸೂಚಿಸಲಾಗಿದೆ.

("ಪರಾಕ್ಲೆಟೋಸ್" ಎಂಬ ಗ್ರೀಕ್ ಪದದ ಅರ್ಥಸಹಾಯಕನು)

ಯೋಹಾನನು ಬರೆದ ಸುವಾರ್ತೆಯಲ್ಲಿ ಮಾತ್ರ ಪವಿತ್ರಾತ್ಮನನ್ನು ಒಬ್ಬ ವ್ಯಕ್ತಿಯೆಂದು ಸೂಚಿಸಲಾಗಿದೆ



## ಇಲ್ಲಿಯವರೆಗೆ ನಾವು ಕಲಿತಿರುವದಕ್ಕೆ ಇದು ಏಕೆ ಪರಸ್ಪರ ವಿರೋದವಾಗಿದೆ?

ಈಗ ಈ ವಿಷಯವನ್ನು ಕುರಿತು ಅಭ್ಯಾಸ ಮಾಡೋಣ –

ಯೋಹಾನ **14:1** ರಿಂದ ಯೋಹಾನ **17**ನೇ ಅಧಿಕಾರದವರೆಗೆ ಮೇಲ್ಹಾವಣಿಯಲ್ಲಿ ಸತತವಾಗಿ ಯೇಸು ತನ್ನ ಶಿಷ್ಯರೊಂದಿಗೆ ಅವರನ್ನು ಸಮಾಧಾನ ಪಡಿಸುವದನ್ನು ನೋಡುತ್ತೇವೆ.

**(ಕೆಂಪು ಅಕ್ಷರಗಳ್ಳುಳ್ಳ ಸತ್ಯವೇದದಲ್ಲಿ, ಶಿಷ್ಯರು ಉತ್ತರಿಸುವುದನ್ನು ಮಾತ್ರ ಕಪ್ಪು ಅಕ್ಷರಗಳಲ್ಲಿ ಕೊಟ್ಟು ಉಳಿದದ್ದೆಲ್ಲವನ್ನು ಕೆಂಪು ಅಕ್ಷರಗಳಲ್ಲಿ ನೀಡಲಾಗಿದೆ.)**

ಈಗ ಯೇಸು ಹೇಳಿದ ಕೆಲವು ವಾಕ್ಯದಳನ್ನು ಆ ಮೂರು ಅಧ್ಯಾಯಗಳಿಂದ ಓದೋಣ –



### ಯೋಹಾನ 14:1,6,7,23; 15:1-5; 16:16

**"ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ",ನನ್ನನ್ನೂ ನಂಬಿರಿ."**

**"ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ"**

**"ನೀವು ನನ್ನನ್ನು ಅರಿತಿದ್ದರೆ ನನ್ನ ತಂದೆಯನ್ನೂ ಅರಿತಿದ್ದಿರಿ; ಈಗಿನಿಂದ ಆತನನ್ನು ಅರಿತುಕೊಂಡಿದ್ದೀರಿ; ಆತನನ್ನು ನೋಡಿದ್ದೀರಲ್ಲಾ ಎಂದು ಹೇಳಿದನು."**

**“ಯಾರಾದರೂ ನನ್ನನ್ನು ಪ್ರೀತಿಸುವನಾದರೆ ನನ್ನ ಮಾತನ್ನು ಕೈಕೊಂಡು ನಡೆಯುವನು; ಅವನನ್ನು ನನ್ನ ತಂದೆಯು ಪ್ರೀತಿಸುವನು, ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು.”**

**ನಾನೇ ನಿಜವಾದ ದ್ರಾಕ್ಷೇಬಳ್ಳಿ. ನನ್ನ ತಂದೆ ತೋಟಗಾರನು. ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದುಹಾಕುತ್ತಾನೆ; ಫಲಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚು ಫಲಕೊಡುವ ಹಾಗೆ ಅದನ್ನು ಶುದ್ಧಿಮಾಡುತ್ತಾನೆ. ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ಶುದ್ಧರಾಗಿದ್ದೀರಿ. ನೀವು ನನ್ನಲ್ಲಿ ನೆಲೆಗೊಂಡಿರ್ರಿ, ನಾನೂ ನಿಮ್ಮಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆತಾನೇ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ. ನಾನು ದ್ರಾಕ್ಷೇಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ."**

**“ಸ್ವಲ್ಪಕಾಲವಾದ ಮೇಲೆ ನಾನು ನಿಮಗೆ ಕಾಣುವದಿಲ್ಲ; ಆನಂತರ ಸ್ವಲ್ಪಕಾಲವಾದ ಮೇಲೆ ನನ್ನನ್ನು ನೋಡುವಿರಿ ಅಂದನು”**

ಹೌದು! ಈ ಅಧ್ಯಾಯಗಳಲ್ಲಿ ಯೇಸು ಹೇಳಿದ ಕೆಲವು ವಾಕ್ಯಗಳೇ ಉದಾಹರಣೆಯಾಗಿದೆ.ಇವುಗಳನ್ನುನೇರವಾದ ಭಾಷೆಯಲ್ಲಿ ತೆಗೆದುಕೊಂಡರೆ ಅರ್ಥಮಾಡಿಕೊಳ್ಳುವುದು ಬಹಳ ಕಷ್ಟಕರವಾಗುತ್ತದೆ.

ಯೇಸು ತಾನು ನಿಜವಾದ ಮರ ಎಂದು ಹೇಳುವುದನ್ನು ಊಹಿಸಿನೋಡಿರಿ–



**ಹಾಗದರೆ ನಿಜವಾಗಿಯೂ ಯೇಸು ಒಂದು ಮರವೇ? ಮತ್ತು ದ್ರಾಕ್ಷೆ ಬಳ್ಳಿಯೇ ಆತನ ತಂದೆ ನಿಜವಾಗಿಯೂ ತೋಟಗಾರನೆ ಮತ್ತು ಆತನ ಶಿಷ್ಯರೆಲ್ಲರೂ ದ್ರಾಕ್ಷೆ ಬಳ್ಳಿಯ ಕೊಂಬೆಗಳೆ?**

**ನಿಜವಾಗಿಯೂ ಅಲ್ಲ!**

ಯೇಸು ಈ ಎಲ್ಲಾ ಮಾತುಗಳನ್ನು ಹೇಳಿದ ಮೇಲೆ ಅಪೊಸ್ತಲರು

ಮತ್ತು ಶಿಷ್ಯರು ಆತನಿಗೆ ಹೇಳಿದ್ದೇನೆಂದರೆ

**ಯೋಹಾನ 16:18**

**"ಸ್ವಲ್ಪಕಾಲವೆಂದು ಈತನು ಹೇಳುವ ಈ ಮಾತೇನು? ಏನು ಮಾತಾಡುತ್ತಾನೋ ನಮಗೆ ತಿಳಿಯದು ಅಂದುಕೊಳ್ಳುತ್ತಿದ್ದರು."**

ಹೌದು! ಶಿಷ್ಯರಿಗೆ ಯೇಸು ಏನು ಹೇಳಿದರೆಂದು ಅರ್ಥಮಾಡಿಕೊಳ್ಳಲಿಲ್ಲ!!

ನಂತರ ಯೇಸು ಹೀಗೆ ವಿವರಿಸುತ್ತಾರೆ–

**ಯೋಹಾನ 16:25**

**"ಈ ಸಂಗತಿಗಳನ್ನು ಗೂಢಾರ್ಥವಾಗಿ ನಿಮಗೆ ಹೇಳಿದ್ದೇನೆ; ಆದರೆ ಇನ್ನು ಮೇಲೆ ಸಾಮ್ಯರೂಪವಾಗಿ ನಿಮ್ಮ ಸಂಗಡ ಮಾತಾಡದೆ ತಂದೆಯ ವಿಷಯದಲ್ಲಿ ಸ್ಪಷ್ಟವಾಗಿ ತಿಳಿಸುವ ಕಾಲ ಬರುತ್ತದೆ." (ಕೆ.ಜೆ.ವಿ)**

ಹೌದು! ಯೇಸು ಅವರೊಂದಿಗೆ ಸಾಮ್ಯರೂಪವಾಗಿ ಮಾತಾಡಿದರೆಂದು ಹೇಳುತ್ತಾರೆ!

ಆದ್ದರಿಂದ ಇಲ್ಲಿ "ದೇವರ ಶಕ್ತಿಯನ್ನು" ಸಾಮ್ಯರೂಪವಾಗಿ ಸಹಾಯಕನು ಎಂದು ಸೂಚಿಸಲಾಗಿದೆ!

ಯೇಸು ತನ್ನನ್ನು "**ದ್ರಾಕ್ಷೆಬಳ್ಳಿ**" ಎಂದೂ, ತನ್ನ ತಂದೆಯನ್ನು ತೋಟಗಾರನೆಂದೂ ಮತ್ತು ತನ್ನ ಶಿಷ್ಯರನ್ನು "ಕೊಂಬೆ" ಎಂದೂ ಹೇಳುತ್ತಾರೆ!!



ಯೇಸು ಇಷ್ಟು ಸ್ಪಷ್ಟವಾಗಿ ಹೇಳಿಯೂ ಸಹ ಯಾರಾದರೂ ಯೇಸು ನೇರವಾದ ಭಾಷೆಯಲ್ಲಿ ಮಾತನಾಡಿದರು ಎಂದು ಒತ್ತಿ ಹೇಳಿದರೆ, **(ಯೋಹಾನ 16:25)** ಯೇಸು ನಿಜವಾದ ದ್ರಾಕ್ಷೆ ಬಳ್ಳಿಯೂ ಮತ್ತು ತಂದೆಯೂ ನಿಜವಾದ ತೋಟಗಾರನೆಂದು ಹೇಳಬೇಕಾಗುತ್ತದೆ.

ಇದನ್ನು ಒಪ್ಪಿಕೊಳ್ಳಲೂ ಸಹ ಬಹಳ ಹಾಸ್ಯಾಸ್ಪದ ಎಂದು ನಮಗೆ ಗೊತ್ತಿದೆ!!

**ಆದ್ದರಿಂದ ಈ ವಿಷಯ ಬಹಳ ಸ್ಪಷ್ಟವಾಗಿದೆ ಎಂದು ತಿಳಿದು ಬರುತ್ತದೆ- ಸಾಮ್ಯರೂಪ ಭಾಷೆಯನ್ನು ನೇರವಾದ ಭಾಷೆಯಾಗಿ ತೆಗೆದುಕೊಳ್ಳಲಾಗಿದೆ! ಹೌದು! ಪವಿತ್ರಾತ್ಮವು ದೇವರ ಶಕ್ತಿ ಒಬ್ಬ ವ್ಯಕ್ತಿ ಅಲ್ಲ!**

ಇದಲ್ಲದೆ ಹಳೇಯ ಒಡಂಬಡಿಕೆಯಲ್ಲಿ ಪವಿತ್ರಾತ್ಮನನ್ನು "ಆತನ (ತಂದೆಯ) ಪವಿತ್ರಾತ್ಮ" ಎಂದು ಹೇಳುವದನ್ನು ಸ್ಪಷ್ಟವಾಗಿ ಓದುತ್ತೆವೆ.

**ಯೆಶಾಯ 63:10**

**“ಅವರಾದರೋ ಎದುರುಬಿದ್ದು ಆತನ ಪವಿತ್ರಾತ್ಮನನ್ನು ದುಃಖಪಡಿಸಿದರು; ಆದದರಿಂದ ಆತನು ಮಾರ್ಪಟ್ಟು ಅವರಿಗೆ ಶತ್ರುವಾಗಿ ತಾನೇ ಅವರೊಡನೆ ಹೋರಾಡಿದನು.”**

ಈಗ ನಾವು ಇನ್ನೊಂದು ಮುಖ್ಯವಾದ ವಿಷಯವನ್ನು ಗಮನಿಸೋಣ, ಅದೇನೆಂದರೆ, ಏಕೆ ಪವಿತ್ರಾತ್ಮನನ್ನು ಕೆಲವು ಕಡೆಗಳಲ್ಲಿ ಪುಲ್ಲಿಂಗ ವಾಗಿಯೂ(**masculine gender**)..... ಬೇರೆ ಕಡೆಗಳಲ್ಲಿ ತಟಸ್ಥ ಲಿಂಗವಾಗಿಯೂ(**neutral gender**) ಕೊಡಲಾಗಿದೆ!

ಗ್ರೀಕ್ ಭಾಷೆಯಲ್ಲಿ ಬರೆದಿರುವ ಈ ಹೊಸ ಒಡಂಬಡಿಕೆಯಲ್ಲಿ ಸ್ತ್ರೀಲಿಂಗ, ಪುಲ್ಲಿಂಗ ಮತ್ತು ತಟಸ್ಥ ಲಿಂಗ, ಈ ಮೂರಕ್ಕೂ ಒಂದೇ ಪದವನ್ನು ಉಪಯೋಗಿಸಲಾಗಿದೆ.

ಆ ಪದವೇ...."ಹೂಟೊ"**("heauteau")** ಮತ್ತು ಗ್ರೀಕ್ ಭಾಷೆಯ ಜನರು ಆ ವಾಕ್ಯಕ್ಕೆ ಅನುಗುಣವಾಗಿ ಲಿಂಗ ವನ್ನು ಕುರಿತು ಅರ್ಥಮಾಡಿಕೊಳ್ಳುತ್ತಿದ್ದರು.

ಆದರೆ ಭಾಷಾಂತರಿಸುವವರು ಪವಿತ್ರಾತ್ಮವನ್ನು ಕುರಿತು ಭಾಷಾಂತರಿಸುವಾಗ ಕೆಲವು ಭಾಷಾಂತರಗಳಲ್ಲಿ ಪುಲ್ಲಿಂಗವೆಂದು, ಬೇರೆ ಕಡೆಗಳಲ್ಲಿ ತಟಸ್ಥ ಲಿಂಗವೆಂದು ಭಾಷಾಂತರಿಸಿದ್ದಾರೆ!!

ಒಂದು ಉದಾಹರಣೆಯನ್ನು ರೋಮಾಪುರದವರಿಗೆ 8:16 ರಲ್ಲಿ ನೋಡಬಹುದು –

"**ನಾವು ದೇವರ ಮಕ್ಕಳಾಗಿದ್ದೇವೆಂದು ಆತ್ಮನು ತಾನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ.**"(ಕೆ.ಜೆ.ವಿ. ಸತ್ಯವೇದ)

ಹೌದು! ನೀವು ನೋಡಿದಿರಾ?!

ಇದು ಬಹಳ ಸ್ಪಷ್ಟ ವಾಗಿದೆಯಲ್ಲವೇ?!

**ಈಗ ಅನೇಕರು ಪವಿತ್ರಾತ್ಮನನ್ನು ಇನ್ನೊಂದು ನೋಟದಲ್ಲಿ ನೋಡುವುದನ್ನು ಕುರಿತು ಓದೋಣ –**

**ಯೋಹಾನ 1:32-33**

**"...ದೇವರಾತ್ಮವು ಪಾರಿವಾಳದಂತೆ ಆಕಾಶದಿಂದ ಇಳಿಯುವದನ್ನು ನೋಡಿದೆನು....."**



ಹೌದು! ಸ್ನಾನಿಕನಾದ ಯೋಹಾನನಿಗೆ ಪಾರಿವಾಳ ಚಿಹ್ನೆಯು ಯೇಸುವನ್ನು ಕಂಡು ಹಿಡಿಯಲು ಗುರುತಾಗಿತ್ತು. **(ಮತ್ತಾಯ 3:16)**

ಒಂದು ವೇಳೆ ಪವಿತ್ರಾತ್ಮವು ನಿಜವಾದ ಪಾರಿವಾಳವಾಗಿದ್ದರೆಪಂಚಶತ್ತಮ ದಿನದಂದೂ ಸಹ ಹಾಗೆಯೇ ವ್ಯಕ್ತ (ಪ್ರಕಟ) ವಾಗಬೇಕಿತ್ತು!

ಆದರೆ ಪಂಚಾಶತ್ತಮ ದಿನವನ್ನು ಕುರಿತು ಏನು ಓದುತ್ತೇವೆ ಎಂದರೆ –

## ಅಪೊಸ್ತಲರ ಕೃತ್ಯಗಳು 2:2,3

**"ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು.ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ."**

ಇಲ್ಲಿ ಪವಿತ್ರಾತ್ಮದ ಚಿಹ್ನೆಯನ್ನು ಪಾರಿವಾಳವಾಗಿ ತೋರಿಸಲಿಲ್ಲ ಆದರೆ "ಉರಿಯಂತಿದ್ದ ನಾಲಿಗೆಗಳು" ಎಂದು ವಿವರಿದಲಾಗಿದೆ.

**ಆದ್ದರಿಂದ ಕಣ್ಣಿಗೆ ಕಾಣದೆ ಇರುವ ದೇವರ ಶಕ್ತಿಯನ್ನುವ್ಯಕ್ತವಾಗುವಂತೆ ಕಣ್ಣಿಗೆ ಕಾಣವಂತಹ ಚಿಹ್ನೆಗಳನ್ನು ನೀಡಲಾಯಿತು**

**ಚಿಹ್ನೆಗಳಲ್ಲಿ ಏಕೆ ಹೀಗೆ ವ್ಯತ್ಯಾಸಗಳಿದ್ದವು?**

ಏಕೆಂದರೆ ಯೇಸುವಿನಲ್ಲಿ ದೇವರ ಶಕ್ತಿಯು "**ಪರಿಶುದ್ಧ ಮತ್ತು ಕಳಂಕವಿಲ್ಲದೆಯೂ**" ಮತ್ತು ಕೊನೆಯಲ್ಲಿ "**ದೇವರಯಜ್ಞದ ಕುರಿಯಾದಾತನಾಗಿ**"ತನ್ನ ಜೀವವನ್ನು ಅರ್ಪಿಸುವಕ್ರಿಯೆ ಮಾಡಬೇಕಿತ್ತು–ಪರಿಶುದ್ದನು.

**ಹೌದು! ಚಿಹ್ನೆಯು "ಪಾರಿವಾಳ"ದಂತಿರ ಬೇಕಾಗಿತ್ತು!**

ಆದರೆ, ಆತನ ಶಿಷ್ಯರ ವಿಷಯದಲ್ಲಿ ಚಿಹ್ನೆಯು "ಉರಿಯಂತಿದ್ದ ನಾಲಿಗೆಯಾಗಿದ್ದು" ಪವಿತ್ರಾತ್ಮ ಶಕ್ತಿಯಿಂದ ಎಲ್ಲಾ ದೇಶಗಳಲ್ಲಿ ಅವರವರದೆ ಭಾಷೆಯಲ್ಲಿ ದೇವರ ರಾಜ್ಯದ ಸುವಾರ್ತೆಯನ್ನು ಮಹಾಶಕ್ತಿಯಿಂದ ಸಾರಬೇಕಿತ್ತು.



ಹೌದು! ಇದಕ್ಕೆ ಚಿಹ್ನೆಯಾವುದೆಂದರೆ "ಉರಿಯುತ್ತಿದ್ದ ನಾಲಿಗೆಗಳು"
ಈಗ ನಾವು ಪವಿತ್ರಾತ್ಮನನ್ನು ಒಂದು ಮನುಷ್ಯನು ಅಥವಾ ಒಂದು ವ್ಯಕ್ತಿ ಎಂಬ ಮನೋಭಾವನೆ ಉಂಟುಮಾಡುವ ಕೆಲವು ವಾಕ್ಯಗಳನ್ನು ಅಪೊಸ್ತಲರ ಕೃತ್ಯಗಳು ಮತ್ತು ಪೌಲನ ಪತ್ರಿಕೆಯಲ್ಲಿ ಓದೋಣ-

**ಅಪೊಸ್ತಲರ ಕೃತ್ಯಗಳು 13:2; 10:19; 16:6; 20:23**

**"ಇವರು ಕರ್ತನನ್ನು ಸೇವಿಸುತ್ತಾ ಉಪವಾಸಮಾಡುತ್ತಾ ಇದ್ದಾಗ ಪವಿತ್ರಾತ್ಮನು_ ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ ಎಂದು ಹೇಳಿದನು."**

**"ಪೇತ್ರನು ಆ ದರ್ಶನದ ವಿಷಯದಲ್ಲಿ ಆಲೋಚನೆಮಾಡುತ್ತಿರಲು ದೇವರಾತ್ಮನು ಅವನಿಗೆ-ಅಗೋ, ಇಬ್ಬರು ಮನುಷ್ಯರು ನಿನ್ನನ್ನು ವಿಚಾರಿಸುತ್ತಾರೆ..."**

**"ಆಸ್ಯಸೀಮೆಯಲ್ಲಿ ವಾಕ್ಯವನ್ನು ಹೇಳಬಾರದೆಂದು ಪವಿತ್ರಾತ್ಮನು ತಡೆದದ್ದರಿಂದ...."**

**"ನಿನಗೆ ಬೇಡಿಗಳೂ ಸಂಕಟಗಳೂ ಕಾದುಕೊಂಡವೆ ಎಂದು ಪವಿತ್ರಾತ್ಮನು ಎಲ್ಲಾ ಪಟ್ಟಣಗಳಲ್ಲಿಯೂ ನನಗೆ ಖಂಡಿತವಾಗಿ ಹೇಳುತ್ತಾನೆ."**

ಪೌಲನ ಪತ್ರಿಕೆಯಲ್ಲಿರುವ ಇನ್ನೊಂದು ಉದಾಹರಣೆ!

**1 ತಿಮೊಥೆಯನಿಗೆ 4:1 – "ಆದರೂ ಮುಂದಣ ದಿನಗಳಲ್ಲಿ ಕೆಲವರು ವಂಚಿಸುವ ಆತ್ಮಗಳ ನುಡಿಗಳಿಗೂ ದೆವ್ವಗಳ ಬೋಧನೆಗಳಿಗೂ ಲಕ್ಷ್ಯಕೊಟ್ಟು ಕ್ರಿಸ್ತನಂಬಿಕೆಯಿಂದ ಭ್ರಷ್ಟರಾಗುವರೆಂದು ದೇವರಾತ್ಮನು ಸ್ಪಷ್ಟವಾಗಿ ಹೇಳುತ್ತಾನೆ."**

ಹೌದು! ಇಲ್ಲಿ ನೋಡುವಾಗ ಪವಿತ್ರಾತ್ಮಕ್ಕೆ "ಧ್ವನಿ" ಮತ್ತು "ಮಾತು" ಇರುವ ಹಾಗೆ ತೋರುತ್ತದೆ!

## ಈ ವಾಕ್ಯಗಳ ಅರ್ಥವೇನು?

ಇದನ್ನು ಒಂದು ಉದಾಹರಣೆಯ ಮೂಲಕ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ.

**ನಾವು ದೇವರ ಮಕ್ಕಳಾಗಿದ್ದು ಯಾರಾದರು ನಮ್ಮನ್ನು ಪಾಪ ಮಾಡುವುದಕ್ಕೆ ಪ್ರೇರೇಪಿಸಿದರೆ ನಾನೇನು ಮಾಡುತ್ತೇವೆ?**

**ಇಲ್ಲ! ಇಲ್ಲ!**

ಇದು ಪಾಪ ಎಂದು ನಾವು ಹೇಳುವುದಿಲ್ಲವೆ? ಮತ್ತು ನನ್ನ ಮನಃಸಾಕ್ಷಿ ಇದನ್ನು ಅನುಮತಿಸದೆ ಇರುವುದು ದರಿಂದ ನಾನು ಪಾಪವನ್ನು ಮಾಡಲಾರೆ ಎಂದು ನಾವು ಹೇಳುವುದಿಲ್ಲವೆ?

ಈ ಮನಃಸಾಕ್ಷಿಯ ಆಂತರಿಕ ಧ್ವನಿಯನ್ನು ನಾವು ಅನೇಕ ಬಾರಿ ಗುರುತಿಸುತ್ತೇವೆ.

**ಆದರೆ ನಮ್ಮ ಈ ಆಂತರಿಕ ಧ್ವನಿಯನ್ನು ಪ್ರತ್ಯೇಕ ವ್ಯಕ್ತಿ ಎಂದು ಹೇಳಬಹುದೆ?**

**ಇಲ್ಲ!**

ಈಗ, ಒಂದು ವೇಳೆ ಮನಃಸಾಕ್ಷಿಗೆ "ಧ್ವನಿ" ಇದ್ದರೆ– ದೇವರ ಪವಿತ್ರಾ ತ್ಮವು ಇನ್ನೂ ಎಷ್ಟೋ ಹೆಚ್ಚಾಗಿ ನಮ್ಮೊಳಗೆ ಮಾತನಾಡಿ ನಮಗೆ ಮಾರ್ಗದರ್ಶನ ನೀಡಬಹುದು!

ಪವಿತ್ರಾತ್ಮವು "ದೇವರ ಶಕ್ತಿ" ಎಂದು ನಾವು ಸ್ಪಷ್ಟವಾಗಿ ಅರ್ಥಮಾಡಿಕೊಂಡ ಮೇಲೆ (ಅಪೊ 2:33) ಈ ಮೇಲಿನ ವಾಕ್ಯಗಳು ಕಣ್ಣಿಗೆ ಕಾಣದಿರುವ ಪವಿತ್ರಾತ್ಮನ ಒಳಗಿನ ಧ್ವನಿ ಎಂದು ನಾವು ಅರ್ಥಮಾಡಿಕೊಳ್ಳಬೇಕು –
ಕ್ರಿಸ್ತನಲ್ಲಿರುವ "ಹೊಸ ಸೃಷ್ಟಿ"ಗೆ ದೈವೀಕ ಮಾರ್ಗದರ್ಶನ (2 ಕೊರಿಂಥ 5:17)
ವಿಶೇಷವಾಗಿ ಆದಿ ಸಭೆಯನ್ನು
ಸ್ಥಾಪಿಸಲು ಜವಾಬ್ದಾರಿಯನ್ನು ಹೊಂದಿದ ಅಪೊಸ್ತಲರಿಗೆ ಪವಿತ್ರಾತ್ಮವು ಬೇಕಾಗಿತ್ತು!

**ಇದು ಅಪೊಸ್ತಲರು ಮತ್ತು ಶಿಷ್ಯರು ತೀರ್ಮಾನ ತೆಗೆದುಕೊಳ್ಳಲು ಅವರ ಮನಸ್ಸಿಗೆ ಪವಿತ್ರಾತ್ಮದ ಮಾರ್ಗದರ್ಶನ ನೀಡಲು ಪ್ರಭಾವ ಬೀರುವದಾಗಿದೆ.**

ಈಗ ಇನ್ನೊಂದು ತಪ್ಪಾಗಿ ತಿಳಿದು ಕೊಂಡಿರುವ ವಾಕ್ಯವನ್ನು ಓದೋಣ

**2 ಕೊರಿಂಥದವರಿಗೆ 33::17**

**"ಮುಸುಕು ತೆಗೆಯಲ್ಪಡುವದು. ಆ ಕರ್ತನು ದೇವರಾತ್ಮನೇ; ಕರ್ತನ ಆತ್ಮನು ಯಾರಲ್ಲಿದ್ದಾನೋ ಅವರಿಗೆ ಬಿಡುಗಡೆ** ಉಂಟು..."

ಅನೇಕರು ಈ ವಾಕ್ಯವನ್ನು ಓದಿ ಯೇಸುವೇ ಆತ್ಮನೆಂದು ತಿಳಿದು ಕೊಂಡಿದ್ದಾರೆ!


**ಈ ವಾಕ್ಯದಲ್ಲಿ ಕೊಟ್ಟಿರುವ ಅರ್ಥವು ಇದೇನಾ?!**

ಮೊದಲನೆಯದಾಗಿ , ಅಪೊಸ್ತಲನಾದ ಪೌಲನ ಭಾಷೆ ಮತ್ತು ಆತನು ಬರೆಯುವ ವಿಧಾನವನ್ನು ಕುರಿತು ಅರ್ಥಮಾಡಿಕೊಳ್ಳಬೇಕು. ಇಲ್ಲಿ ಅಪೊಸ್ತಲನಾದ ಪೇತ್ರನು ವಿವರಿಸುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

## 2 ಪೇತ್ರನು 3:16

**"ಅವನು ತನ್ನ ಎಲ್ಲಾ ಪತ್ರಿಕೆಗಳಲ್ಲಿಯೂ ಈ ವಿಷಯಗಳನ್ನು ಕುರಿತು ಬರೆಯುವಾಗ ಹೀಗೆ ಬೋಧಿಸಿದ್ದಾನೆ. ಆ ಪತ್ರಿಕೆಗಳಲ್ಲಿರುವ ಕೆಲವು ಮಾತುಗಳು ತಿಳಿಯುವದಕ್ಕೆ ಕಷ್ಟವಾಗಿವೆ. ವಿದ್ಯಾಹೀನರೂ ಚಪಲಚಿತ್ತರೂ ಹೇಗೆನಮಗಿರುವ ಮಿಕ್ಕಾದ ಗ್ರಂಥಗಳಿಗೆ ತಪ್ಪಾದ ಅರ್ಥ ಮಾಡಿಕೊಂಡಿದ್ದಾರೋ ಹಾಗೆಯೇ ಇವುಗಳಿಗೂ ತಪ್ಪಾದ ಅರ್ಥ ಮಾಡಿಕೊಂಡು ತಮಗೆ ನಾಶವನ್ನುಂಟುಮಾಡಿಕೊಳ್ಳುತ್ತಾರೆ."**

ಹೌದು! ಅಪೊಸ್ತಲನಾದ ಪೇತ್ರನು ನಮಗೆ ಹೇಳುವುದೇನೆಂದರೆ ಅಪೊಸ್ತಲನಾದ ಪೌಲನ ಬರವಣಿಗೆಯು ಅಷ್ಟು ಸುಲಭವಾಗಿ ಅರ್ಥಮಾಡಿಕೊಳ್ಳಲು ಆಗುವುದಿಲ್ಲ ಮತ್ತು ಒಬ್ಬ ವ್ಯಕ್ತಿಯು ಅದನ್ನು ಓದುವಾಗ ಮತ್ತು ಅರ್ಥಮಾಡಿಕೊಳ್ಳುವಾಗ ಬಹಳ ಎಚ್ಚರಿಕೆಯಿಂದಿರಬೇಕು.!



ಈ ವಾಕ್ಯದಲ್ಲಿಯೂ ಅದೇ ರೀತಿಯಾಗಿದೆ!
ಈಗ ಇದರ ಒಳಗಿನ ಮತ್ತು ಆಳವಾದ ಅರ್ಥಗಳನ್ನು ನೋಡೋಣ.

## "ಆ ಕರ್ತನು ದೇವರಾತ್ಮನೇ"

ಇದು ನಮ್ಮ ಕರ್ತನಾದ ಯೇಸುಕ್ರಿಸ್ತ ಕಲ್ವಾರಿ ಶಿಲುಬೆಯಲ್ಲಿ ಮರಣ ಹೊಂದಿ ಪುನರುತ್ಥಾನದ ನಂತರ ಈತನ ಆತ್ಮೀಕ ಸ್ಥಿತಿಯನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

## 1 ಪೇತ್ರನು 3:18 / 2 ಕೊರಿಂಥದವರಿಗೆ 5:16

**"ಕ್ರಿಸ್ತನು ಸಹ ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ ಪ್ರಾಣಕೊಟ್ಟು ನಮ್ಮನ್ನು ದೇವರ ಬಳಿಗೆ ಸೇರಿಸುವದಕ್ಕಾಗಿ ಒಂದೇ ಸಾರಿ ಪಾಪನಿವಾರಣಕ್ಕೋಸ್ಕರ ಬಾಧೆಪಟ್ಟು**

**ಸತ್ತನು. ಆತನು ಶರೀರಸಂಬಂಧದಲ್ಲಿ ಕೊಲ್ಲಲ್ಪಟ್ಟನು, ಆತ್ಮಸಂಬಂಧದಲ್ಲಿ ತಿರಿಗಿ ಬದುಕುವವನಾದನು.”**

**“ಹೀಗಿರಲಾಗಿ ಇಂದಿನಿಂದ ನಾವು ಯಾರನ್ನೂ ಶರೀರಸಂಬಂಧವಾಗಿ ಅರಿತುಕೊಳ್ಳುವದಿಲ್ಲ; ಕ್ರಿಸ್ತನನ್ನು ಕೂಡ ನಾವು ಶರೀರಸಂಬಂಧವಾಗಿ ತಿಳಿದಿದ್ದರೂ ಇನ್ನು ಮುಂದೆ ಆತನನ್ನು ಹಾಗೆ ತಿಳುಕೊಳ್ಳುವದಿಲ್ಲ.”**



ಹೌದು! ಇದರಿಂದ ನಮಗೆ ಸ್ಪಷ್ಟವಾಗಿ ಅರ್ಥವಾಗುವುದೇನೆಂದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನು ಈಗ ಮಾಂಸಧಾರಿಯಾದ- "ಮನುಷ್ಯ"ನಲ್ಲ..... ಆದರೆ ಆತನು ಮಹಾಶಕ್ತಿಯುಳ್ಳ ಆತ್ಮೀಕ ಜೀವಿಯಾಗಿದ್ದಾನೆ.

## “ಕರ್ತನ ಆತ್ಮನು”

ಇಲ್ಲಿ “ಆತ್ಮನು” ಎಂಬ ಪದವು ನಮ್ಮ ಕರ್ತನಾದ ಯೇಸುವಿನ ವಾಕ್ಯವಗಿದ್ದು, "ಆತ್ಮದ" ಅರ್ಥವನ್ನು ಯೇಸುವೆ ವಿವರಿಸುವುದನ್ನು ಈ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ-

## ಯೋಹಾನ 6:63

**“ಬದುಕಿಸುವಂಥದು ಆತ್ಮವೇ; ಮಾಂಸವುಯಾವದಕ್ಕೂ ಬರುವದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ.”**

ಮತ್ತು ಯೇಸು ಮಾತನಾಡಿದ ಈ ವಾಕ್ಯಗಳು ದೇವರ ವಾಕ್ಯಗಳೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ-

## ಯೋಹಾನ 3:34

**“ಹೇಗಂದರೆ ದೇವರು ಯಾರನ್ನು ಕಳುಹಿಸಿದ್ದಾನೋ ಆತನಿಗೆ ಆತ್ಮ ವರವನ್ನು ಅಳತೆಮಾಡದೆ ಅನುಗ್ರಹಿಸುವದರಿಂದ ಆತನು ದೇವರ ಮಾತುಗಳನ್ನೇ ಆಡುತ್ತಾನೆ.”**

ಹೌದು! ಮತ್ತು ದೇವರ ವಾಕ್ಯಗಳೆಲ್ಲವೂ ಸತ್ಯವೆಂದು ನಮಗೆ ಗೊತ್ತಿದೆ ಏಕೆಂದರೆ ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ

## ಯೋಹಾನ 17:17

**“ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆ ಪಡಿಸು ; ನಿನ್ನ ವಾಕ್ಯವೇ ಸತ್ಯವು.”**

ಆದ್ದರಿಂದ "**ದೇವರ ಆತ್ಮ**" ಎಂದರೆ ಕರ್ತನಾದ ಯೇಸುವಿನ ಸತ್ಯ ವಾಕ್ಯಗಳನ್ನು ಸೂಚಿಸುತ್ತದೆ.

**“ಅವರಿಗೆ ಬಿಡುಗಡೆ ಉಂಟು” –**

ಇದು ಸತ್ಯವನ್ನು ಸೂಚಿಸುತ್ತದೆ ಮತು ಒಬ್ಬ ಮನುಷ್ಯನನ್ನು ಬಿಡುಗಡೆ ಮಾಡುವಂತಹ ಪ್ರಭಾವ ಬೀರುವುದನ್ನು ಸೂಚಿಸುತ್ತದೆ ಎಂದು ನಮ್ಮ ಕರ್ತನಾದ ಯೇಸು ವಾಗ್ದಾನ ಮಾಡಿರುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

## ಯೋಹಾನ 8:32

**"....ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆಮಾಡುವದು ಎಂದು ಹೇಳಿದನು.”**

**ನಿಜವಾದ ಕ್ರಿಸ್ತವನ ಮೇಲೆ ಬೀರುವ ಸತ್ಯದ ಪರಿಣಾಮವನ್ನು ಕುರಿತು ಅಪೊಸ್ತಲನಾದ ಪೌಲನು ಸುಂದರವಾದ ಆಲೋಚನೆಯ ಮುಲಕವಾಗಿ ವರ್ಣಿಸುವುದನ್ನು ನೋಡಿದಿರಾ?**

ಈಗ ಇನ್ನೊಂದು ವಾಕ್ಯದಲ್ಲಿರುವ ಸಂದೇಹವನ್ನು ಕುರಿತು ನೋಡೋಣ...

## ಎಫೆಸದವರಿಗೆ 4:30

**“ದೇವರ ಪವಿತ್ರಾತ್ಮನನ್ನು ದುಃಖಪಡಿಸ ಬೇಡಿರಿ;..“**

"ದುಃಖ ಪಡಿಸಬೇಡಿರಿ" ಎಂಬ ಪದವು ಪವಿತ್ರಾತ್ಮವನ್ನು ಒಬ್ಬ ವ್ಯಕ್ತಿಯೆಂದು ಸೂಚಿಸುವ ಹಾಗೆ ತೋರುತ್ತದೆ.

ಆದರೆ ಇಲ್ಲಿ ನಿಜವಾಗಿಯೂ ತಂದೆಯಾದ ದೇವರನನ್ನು ದುಃಖಪಡಿಸುವುದನ್ನು ಸೂಚಿಸುತ್ತದೆ. ಆತನ ಆತ್ಮ ಅಥವಾ ಬಲವನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

## ಯೆಶಾಯ 63:10

**"ಅವರಾದರೋ ಎದುರುಬಿದ್ದು ಆತನ ಪವಿತ್ರಾತ್ಮನನ್ನು ದುಃಖಪಡಿಸಿದರು; ಆದದರಿಂದ ಆತನು ಮಾರ್ಪಟ್ಟು ಅವರಿಗೆ ಶತ್ರುವಾಗಿ ತಾನೇ ಅವರೊಡನೆ ಹೋರಾಡಿದನು."**

ಹೌದು! ಪವಿತ್ರಾತ್ಮವು ತಂದೆಯಾದ ದೇವರ ಬಲವಾಗಿದೆ!

**ನಿಜವಾದ ಕ್ರೈಸ್ತವನ ಮೇಲೆ ಬೀರುವ ಸತ್ಯದ ಪರಿಣಾಮವನ್ನು ಕುರಿತು ಅಪೊಸ್ತಲನಾದ ಪೌಲನು ಸುಂದರವಾದ ಆಲೋಚನೆಯ ಮುಲಕವಾಗಿ ವರ್ಣಿಸುವುದನ್ನು ನೋಡಿದಿರಾ?**

ಮತ್ತು ಕೆಳಗಿನ ವಾಕ್ಯವನ್ನು ಕುರಿತು ಏನು ಹೇಳೋಣ.

## ಲೂಕ 12:10

**"ಮನುಷ್ಯ ಕುಮಾರನ ಮೇಲೆ ಏನಾದರೂ ಮಾತಾಡುವ ಪ್ರತಿಯೊಬ್ಬನಿಗೆ ಕ್ಷಮಾಪಣೆಯಾಗುವದು; ಆದರೆ ಪವಿತ್ರಾತ್ಮನನ್ನು ದೂಷಿಸಿದವನಿಗೆ ಕ್ಷಮಪಣೆಯಿಲ್ಲ."**

**ಈ ವಾಕ್ಯದ ಅರ್ಥವೇನು?**

ಈ ವಾಕ್ಯವು ಪವಿತ್ರಾತ್ಮ ಇಲ್ಲದೆ ಇರುವ ಜನರು ಈ ದಿನಗಳಲ್ಲಿ ಯೇಸುವಿಗೆ ವಿರೋಧವಾಗಿ ಮಾತನಾಡುವುದನ್ನು ಸೂಚಿಸುತ್ತದೆ.

**(ಉದಾ: ಭಾರತದ ಆರ್.ಎಸ್.ಎಸ್.ನವರು, ಸೌದಿ ಅರೇಬಿಯಾದ ಮುಸ್ಲಿಮರು ಇತರೆ)**

ಅವರು ಅರಿಯದೆ ಇರುವುದರಿಂದ ಕ್ಷಮಿಸಲ್ಪಡುವದು ಆದರೆ ಪವಿತ್ರಾತ್ಮವನ್ನು ಹೊಂದಿ ಯೇಸುವನ್ನು "**ದೂಷಿಸುವವರನ್ನು**" ಮತ್ತು ಪಾಪ ಮಾಡುವವರನ್ನು ದಂಡಿಸಲಾಗುವದು ಮತ್ತು ಕ್ಷಮಿಸಲಾಗುವುದಿಲ್ಲ. ಏಕೆಂದರೆ ಅವರು ದೇವರ ಜ್ಞಾನವನ್ನು ಪಡೆದು ಕೊಂಡಿರುವದು ಪವಿತ್ರಾತ್ಮನ ಮೂಲಕವೇ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

## 1 ಕೊರಿಂಥ ಗದವರಿಗೆ 2:14

**"ಪ್ರಾಕೃತಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಅವನಿಗೆ ಹುಚ್ಚುಮಾತಾಗಿ ತೋರುತ್ತವೆ; ಅವು ಆತ್ಮವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು."**

ಇದು ತಂದೆ ತಾಯಂದಿರು ತಮ್ಮ ಕಿರಿಯ ಮಕ್ಕಳಿಗಿಂತ ದೊಡ್ಡ ಮಕ್ಕಳು ಮಾಡಿದ ತಪ್ಪಿಗಾಗಿ ಮತ್ತು ಕೆಟ್ಟ ನಡತೆಗಾಗಿ  ಹೆಚ್ಚಾಗಿ ಶಿಕ್ಷಿಸುತ್ತಾರೆ. ಏಕೆಂದರೆ ದೊಡ್ಡ ಮಕ್ಕಳು ಚಿಕ್ಕ ಮಕ್ಕಳಿಗಿಂತ ಅಧಿಕವಾಗಿ ಜ್ಞಾನ ಮತ್ತು ಬುದ್ಧಿ ಶಕ್ತಿಯನ್ನು ಹೊಂದಿರುತ್ತಾರೆ.!

## .....ದೇವರಿಗೂ ಸಹ ಇದೇ ನಿಯಮವಿರುತ್ತದೆ!

ಯಾರ್‍ಯಾರು ಪವಿತ್ರಾತ್ಮದ ಮೂಲಕ ಹೆಚ್ಚಾಗಿ ಜ್ಞಾನವನ್ನು ಹೊಂದಿರುತ್ತಾರೆ. ಅವರಿಗೆ ಅಷ್ಟು ಸುಲಭವಾಗಿ ಕ್ಷಮಿಸಲಾಗುವುದಿಲ್ಲ, ಆದರೆ ಅವರು ಶಿಕ್ಷೆ ಅಥವಾ ದಂಡನೆಯನ್ನು ಹೊಂದುವರು.

ಕೊನೆಯದಾಗಿ, ಮನುಷ್ಯನ ಜಾತಿಗೆ ದೇವರು ಇಟ್ಟಿರುವ ರಕ್ಷಣೆಯ ದೈವಿಕ ಯೋಜನೆಯು ಪರಿಪೂರ್ಣವಾದಾಗ ಎಲ್ಲರೂ ಯಾರಿಗೆ ಸ್ತುತಿ ಮತ್ತು ವಂದನೆಯನ್ನು ಸಲ್ಲಿಸುವರೆಂದು ಕೆಳಗಿನ ವಾಕ್ಯದಲ್ಲಿ ಗಮನಿಸಿರಿ–

**ಪ್ರಕಟನೆ 5:13**

**"…..ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಸ್ತೋತ್ರ ಮಾನ ಪ್ರಭಾವ ಆಧಿಪತ್ಯಗಳು ಯುಗ ಯುಗಾಂತರಗಳಲ್ಲಿಯೂ ಇರಲಿ."**



**ಹೌದು! ಇಲ್ಲಿ ಎಷ್ಟು ಜನರಿಗೆ ವಂದನೆಯನ್ನು ಸಲ್ಲಿಸಲಾಗಿದೆ?**

**ಇಬ್ಬರಿಗೆ ಅಲ್ಲವೇ?**

**ಪವಿತ್ರಾತ್ಮನು ಏಕೆ ಕಾಣೆಯಾಗಿದ್ದಾರೆ?**

ಏಕೆಂದರೆ ಇಂದಿನ ಅಭ್ಯಾಸದಲ್ಲಿ ನೋಡಿದ್ದೇವೆ ದೇವರ ಪವಿತ್ರಾತ್ಮವು

**....ಒಬ್ಬ ವ್ಯಕ್ತಿ ಅಲ್ಲ!!**

ಕೊನೆಯದಾಗಿ ನಾವು ಹೀಗೆ ಓದುತ್ತೇವೆ–

**1 ಯೋಹಾನ 1:3**

**"ನಾವು ಕಂಡು ಕೇಳಿದ್ದು ನಿಮಗೂ ಗೊತ್ತಾಗಿ ನಮಗಿರುವ ಅನ್ಯೋನ್ಯತೆಯಲ್ಲಿ ನೀವೂ ಸೇರಬೇಕೆಂದು ಅದನ್ನು ನಿಮಗೆ ಪ್ರಸಿದ್ಧಿಪಡಿಸುತ್ತೇವೆ. ನಮಗಿರುವ ಅನ್ಯೋನ್ಯತೆಯು**

ತಂದೆಯ ಸಂಗಡಲೂ ಆತನ ಮಗನಾದ ಯೇಸು ಕ್ರಿಸ್ತನ ಸಂಗಡಲೂ ಇರುವಂಥದು."

ಹೌದು! ಇಲ್ಲಿ ಇಬ್ಬರೊಂದಿಗೆ ಮಾತ್ರ ಐಕ್ಯವಿರುವುದನ್ನು ಗಮನಿಸಿರಿ, ಮತ್ತು ಪವಿತ್ರಾತ್ಮನನ್ನು ಕುರಿತು ಇಲ್ಲಿ ತಿಳಿಸಲಿಲ್ಲ.

ಹೌದು! ಮತ್ತೆ ನಾವು ಹೀಗೆ ಓದುತ್ತೇವೆ–

**2 ಯೋಹಾನ 1:9-11**

**"ಕ್ರಿಸ್ತನ ಉಪದೇಶದಲ್ಲಿ ನೆಲೆಗೊಳ್ಳದೆ ಅದನ್ನು ಅತಿಕ್ರಮಿಸಿ ಮುಂದಕ್ಕೆ ಹೋಗುವವನಿಗೆ ದೇವರ ಅನ್ಯೋನ್ಯತೆಯಿಲ್ಲ. ಆ ಉಪದೇಶದಲ್ಲಿ ನೆಲೆಗೊಂಡಿರುವವನಿಗೆ ತಂದೆಯ ಮತ್ತು ಮಗನ ಅನ್ಯೋನ್ಯತೆ ಉಂಟು. ಈ ಉಪದೇಶಕ್ಕೆ ಒಪ್ಪದಿರುವ ಯಾವನಾದರೂ ನಿಮ್ಮ ಬಳಿಗೆ ಬಂದರೆ ಅವನನ್ನು ಮನೆಯೊಳಗೆ ಸೇರಿಸಿ ಕೊಳ್ಳಬೇಡಿರಿ, ಅವನಿಗೆ ಶುಭವಾಗಲಿ ಎಂದು ಹೇಳಬೇಡಿರಿ. ಅವನಿಗೆ ಶುಭವಾಗಲಿ ಎಂದು ಹೇಳುವವನು ಅವನ ದುಷ್ಕೃತ್ಯಗಳಲ್ಲಿ ಪಾಲುಗಾರನಾಗುತ್ತಾನೆ."**

ಆದರೆ ಈ ದಿನಗಳಲ್ಲಿ ಈ ವಾಕ್ಯವನ್ನು ಎದುರು ಬದುರಾಗಿ ತಿಳಿದು ಕೊಂಡಿರುವದು ಎಷ್ಟು ಆಶ್ಚರ್ಯಕರವಾಗಿದೆ!
ಅನೇಕ ಕ್ರೈಸ್ತರು ತ್ರೈಯೇಕತ್ವದ ಉಪದೇಶವನ್ನು ಬಿಟ್ಟು ಬೇರೆ ಉಪದೇಶ ಮಾಡಿದರೆ ಅವರಿಗೆ ಕೆಳಗಿನ ವಾಕ್ಯದಂತೆ ನಡೆಸುತ್ತಾರೆ.

**"ಯಾವನಾದರೂ ನಿಮ್ಮ ಬಳಿಗೆ ಬಂದರೆ ಅವನನ್ನು ಮನೆಯೊಳಗೆ ಸೇರಿಸಿಕೊಳ್ಳಬೇಡಿರಿ ಅವನಿಗೆ ಶುಭವಾಗಲಿ ಎಂದು ಹೇಳಬೇಡಿರಿ"**

ನಿಜವಾಗಿಯೂ, ಸತ್ಯದ ಬೆಳಕಿನ ಮೇಲೆ ಕತ್ತಲೆ ಪೂರ್ತಿಯಾಗಿ ಕವಿದಿದೆ!!

**ಆದಿ ಸಭೆಗೆ ಈ ಸತ್ಯ ತಿಳಿದಿತ್ತು.!**

ಈಗ ಈ ಸತ್ಯ ನಮಗೂ ಗೊತ್ತಿರುವದರಿಂದ ದೇವರಿಗೆ ವಂದನೆಯನ್ನು ಸಲ್ಲಿಸೋಣ!

**ಆದ್ದರಿಂದ, ಸತ್ಯವೇದದಲ್ಲಿ ತ್ರೈಯೇಕತ್ವವನ್ನು ಕುರಿತು ಬೋಧಿಸುವುದಿಲ್ಲ. ಆದರೆ ಇಬ್ಬರು ವ್ಯಕ್ತಿಗಳ ಬಗ್ಗೆ ಮಾತ್ರ- ಅಂದರೆ ತಂದೆ ಮತ್ತು ಮಗನ ಬಗ್ಗೆ ಮಾತ್ರ ಬೋಧಿಸುತ್ತದೆ!**

ಯೇಸು ಕೆಳಗಿನ ವಾಕ್ಯದಲ್ಲಿ ಹೇಳಿರುವ ಹಾಗೆ ಇಬ್ಬರೂ ಒಂದೇನಾ?

**ಯೋಹಾನ 10:30 – "ನಾನೂ ತಂದೆಯೂ ಒಂದಾಗಿದ್ದೇವೆ".**


**ಈ ವಿಷಯವನ್ನು ಕುರಿತು ಮುಂದಿನ ಅಧ್ಯಾಯದಲ್ಲಿ ನೋಡೋಣ**

ಆಮೆನ್



For Private Circulation Only

NOT FOR SALE




**Jesus Loves** *Ministry*

For free indepth Bible study contact

Br.Raju 8867768876

# 1, BETHESDA, 1st floor, Janani Enclave, 1st cross,
Thiglarapalya Andrahalli Main Rd, B'lore 560058

Email : rajudawn@yahoo.com

SUBSCRIBE TO OUR CHANNEL

Available Languages : Kannada, English, Hindi, Tamil and Telugu